ಸಂಪುಟ : 8 ಸಂಚಿಕೆ : 285 ಪುಟ : 4 ಬೆಲೆ : 3.00 ಶನಿವಾರ ಡಿಸೆಂಬರ್ 23, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 285 Pages : 4 Price : 3.00 Saturday December 23, 2023 Gadag RNI No:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಡಿ. 23 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 11,12 ರಲ್ಲಿ ಗಾರ್ಡನ್ ಭಾಗ, ಕರೆಮ್ಮ ಕಾಲೋನಿ, ಇರಾನಿ ಕಾಲೋನಿಯ ಹನುಮಂತ ದೇವರ ಗುಡಿ, ವಿವೇಕಾನಂದ ನಗರ ಗಣಪತಿ ಗುಡಿ ಲೈನ್, ಹಳೇ ಪೋಸ್ಟ್ ಆಫೀಸ್ ಲೈನ್, ವಾರ್ಡ್ ನಂ. 29 ರಲ್ಲಿ ಹೊಸ ಹುಡ್ಕೋ ಲೈನ್ ಕೆಲವು ಭಾಗಗಳು, ಭಾಂಡಗೆ ಲೈನ್, ಮಸೂತಿ ಲೈನ್,

ವಾರ್ಡ್ ನಂ. 2 ವೆಲ್ಫೇರ್, ಕುಷ್ಟಗಿ ಚಾಳ್, ಮಾನ್ವಿ ಚಾಳ್ ಕೆಲವು ಭಾಗಗಳು, ವಾರ್ಡ್ ನಂ. 21, 16 ರಲ್ಲಿ ಕುಂಭೇಶ್ವರ್ ನಗರ ನಾಲ್ಕು ಭಾಗಗಳು, ಸುಣ್ಣದ ಬಟ್ಟಿ ಎರಡೂ ಭಾಗಗಳು, ಕುಷ್ಟರೋಗ ಕಾಲೋನಿಯ 2 ಭಾಗಗಳು, ಕುಂಬಾರ ಓಣಿ, ಅಂಬೇಡ್ಕರ್ ನಗರ 3 ಭಾಗಗಳು, ಅಬ್ಬಿಗೇರಿ ಲೈನ್, ಗುಡದೂರುಸ್ವಾಮಿ ಮಠ ಎಡ ಭಾಗ, ಬಲ ಭಾಗ, ವಾರ್ಡ್ ನಂ. 22ರಲ್ಲಿ ಅಪಾರ್ಟ್‌ಮೆಂಟ್, ಗಿರಣಿ ಲೈನ್, ದಖನಿ ಲೈನ್, ಈಶ್ವರಗುಡಿ ಲೈನ್,

ವಾರ್ಡ್ ನಂ. 15, 16 ರಲ್ಲಿ ಶಹಾಪೂರ ಪೇಟೆ, ಜವಳಗಲ್ಲಿ, ಮೀನಿನ ಮಾರ್ಕೆಟ್, ಭಜಂತ್ರಿ ಓಣಿ, ಮಹೇಂದ್ರಕರ್ ಸರ್ಕಲ್ ಲೈನ್, ಡಿ ಸಿ ಮಿಲ್ ರಸ್ತೆ, ಗಾಂಧಿ ಸರ್ಕಲ್ ಲೈನ್, ಅಂಗನವಾಡಿ, ಶುದ್ಧ ನೀರಿನ ಘಟಕದ ಸುತ್ತ ಮುತ್ತಲಿನ ಲೈನ್‌ಗಳು, ಕರ್ನಾಟಕ ಟಾಕೀಸ್ ಲೈನ್, ಗಣೇಶ ಗುಡಿ ಲೈನ್, ಶರಣಬಸವೇಶ್ವರ ಗುಡಿ

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರದ ಸಂವಿಧಾನ ವಿರೋಧಿ ನೀತಿ ಖಂಡಿಸಿ ನಡೆದ ಪ್ರತಿಭಟನೆಯಲ್ಲಿ ಕೃಷ್ಣಗೌಡ ಪಾಟೀಲ

ಕೇಂದ್ರದ ಆಟ ನಡೆಯದು

■ ವಿಜಯಸಾಕ್ಷಿ ಸುದ್ದಿ, ಗದಗ

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿರುವುದಷ್ಟೇ ಅಲ್ಲದೆ, ಪ್ರಜಾಪ್ರಭುತ್ವ ವಿರೋಧಿಯಾಗಿಯೂ ನಡೆದುಕೊಳ್ಳುತ್ತಿದೆ ಎಂದು ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೃಷ್ಣಗೌಡ ಎಚ್.ಪಾಟೀಲ ಕಿಡಿಕಾರಿದರು.

ಕೇಂದ್ರ ಸರ್ಕಾರದ ಜನವಿರೋಧಿ ನೀತಿಯನ್ನು ಸಂಸತ್‌ನಲ್ಲಿ ಪ್ರಶ್ನಿಸಿದ ವಿರೋಧ ಪಕ್ಷಗಳ ಸಂಸದರನ್ನು ಅಮಾನತು ಮಾಡುವ ಮೂಲಕ

> ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ ಮಂದಾಲಿ ಮಾತನಾಡಿ, ಪ್ರಜಾಪ್ರಭುತ್ವದ ವಿರೋಧಿ ನಡೆಯಿಂದಾಗಿ ಬಿಜೆಪಿ ಸಂಸತ್ ಖಾಲಿಯಾಗಿದೆ. ಸಂವಿಧಾನ ವಿರೋಧಿ, ಸರ್ವಾಧಿಕಾರಿ ನರೇಂದ್ರ ಮೋದಿ ಸರ್ಕಾರ, ನ್ಯಾಯ ಕೇಳಿದ ಸಂಸದರಿಗೆ ಬಿಜೆಪಿ ಸರ್ಕಾರದಿಂದ ಅನ್ಯಾಯ ಆಗುತ್ತಿದೆ. 142 ಸಂಸದರ ಧ್ವನಿಗೆ ಬೆಲೆ ನೀಡದ ಹೊಣೆಗೇಡಿ ಕೇಂದ್ರ ಸರ್ಕಾರದ ಸ್ಥಿತಿ ಕೈಲಾಗದವರು ಮೈ ಪರಚಿಕೊಂಡಂತಾಗಿದೆ ಎಂದು ಲೇವಡಿ ಮಾಡಿದರು.

ಕೇಂದ್ರವು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ ಎಂದು ಆರೋಪಿಸಿ ಶುಕ್ರವಾರ ನಗರದ ಗಾಂಧಿ ವೃತ್ತದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸಂಸತ್ ಭವನ ದೇಶದ ದೇಗುಲವಿದ್ದಂತೆ. ಅಲ್ಲಿ ಹೆಚ್ಚು ಭದ್ರತೆಯೂ ಇದೆ. ಆದರೆ, ಇದರ ಮಧ್ಯೆಯೂ ಈಚೆಗೆ ಇಬ್ಬರು ಯುವಕರು ಬಿಜೆಪಿಯ ಸಂಸದರೊಬ್ಬರ ಮೂಲಕ ಪಾಸ್ ಪಡೆದು, ಗ್ಯಾಲರಿಯಿಂದ ಸಂಸದರಿದ್ದ ಸ್ಥಳಕ್ಕೆ ಜಿಗಿದು, ಭಯ ಮೂಡಿಸಿದ್ದಾರೆ. ಇದು ಭದ್ರತಾ ವೈಫಲ್ಯವನ್ನು ತೋರಿಸುತ್ತದೆ. ಹೀಗಿದ್ದರೂ ಆ ಯುವಕರು ಸಂಸತ್ ಪ್ರವೇಶ ಪಡೆಯಲು ಪಾಸ್ ನೀಡಿದ ರಾಜ್ಯದ ಸಂಸದರೂ ಈ ಬಗ್ಗೆ ಮಾತನಾಡಲಿಲ್ಲ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಭದ್ರತೆಯ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುವ ಕೇಂದ್ರ ಗೃಹ ಸಚಿವರು ಕೂಡ ಈ ಬಗ್ಗೆ ಮಾತನಾಡುತ್ತಿಲ್ಲ ಎಂದರು.

ಆದರೆ, ಸಂಸತ್‌ನಲ್ಲಿನ ಈ ಭದ್ರತಾ ವೈಫಲ್ಯದ ಕುರಿತು ಆಡಳಿತ ಪಕ್ಷವನ್ನು ಪ್ರಶ್ನಿಸುವ ವಿರೋಧ ಪಕ್ಷದ ಸದಸ್ಯರನ್ನು ಅಮಾನತು ಮಾಡುವ ಕ್ರಮ ಖಂಡನೀಯ. ಇದು ಬಹಳ ದಿನ ನಡೆಯುವುದಿಲ್ಲ.

> ಬಿಜೆಪಿ ತಮಗೆ ಎದುರಾಳಿಗಳೇ ಇರಬಾರದು, ವಿಪಕ್ಷದವರ ಅನುಪಸ್ಥಿತಿಯಲ್ಲಿ ತಮಗೆ ಬೇಕಾದ ಬಿಲ್‌ಗಳನ್ನು ಚರ್ಚೆಯಿಲ್ಲದೇ ಪಾಸ್ ಮಾಡಿಕೊಳ್ಳಬಹುದು ಎಂಬ ಸರ್ವಾಧಿಕಾರಿ ಧೋರಣೆಯಿಂದ, ಪ್ರಶ್ನಿಸುವ ವಿರೋಧ ಪಕ್ಷಗಳನ್ನು ಸದೆಬಡಿಯುವ ಉದ್ದೇಶದಿಂದ ಸಂಸದರನ್ನು ಅಮಾನತು ಮಾಡುತ್ತಿರುವುದು ಪ್ರಜಾಪ್ರಭುತ್ವ ವಿರೋಧಿ ನಡೆಯಾಗಿದೆ.
>
> – ಕೃಷ್ಣಗೌಡ ಎಚ್.ಪಾಟೀಲ.
> ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ.

ಮುಂಬರುವ ದಿನಗಳಲ್ಲಿ ರಾಜ್ಯವೂ ಸೇರಿದಂತೆ ದೇಶದ ಜನ ಬಿಜೆಪಿಗೆ ತಕ್ಕ ಪಾಠ ಕಲಿಸದೇ ಬಿಡಲಾರರು ಎಂದು ಎಚ್ಚರಿಸಿದರು.

ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಫಕ್ಕೀರಪ್ಪ ಹೆಬಸೂರ, ಗದಗ–ಬೆಟಗೇರಿ ಶಹರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಬಿ. ಅಸೂಟಿ ಮಾತನಾಡಿದರು. ಇದೇ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಮಾನವ ಸರಪಳಿ ನಿರ್ಮಿಸಿ ಆಕ್ರೋಶ ವ್ಯಕ್ತಪಡಿಸಿದರು.

▸▸ ೩ನೇ ಪುಟಕ್ಕೆ

'ಚಿಣ್ಣರ ಚಾವಡಿ' ಕಾರ್ಯಕ್ರಮ ಇಂದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕರ್ನಾಟಕ ನಾಮಕರಣದ ಸುವರ್ಣ ಸಂಭ್ರಮ ಕಾರ್ಯಕ್ರಮ ಮಾಲಿಕೆಯಡಿ ಗೊಜನೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಡಿ.23ರ ಬೆಳಿಗ್ಗೆ 10ಕ್ಕೆ 'ಚಿಣ್ಣರ ಚಾವಡಿ' ವಿಚಾರ ಕಲರವ ಕಾರ್ಯಕ್ರಮ ಜರುಗಲಿದೆ.

ಗ್ರಾ.ಪಂ ಅಧ್ಯಕ್ಷೆ ನೀಲವ್ವ ಮಾದರ ಉದ್ಘಾಟಿಸುವರು. ಕಸಾಪ ತಾಲೂಕಾಧ್ಯಕ್ಷ ಈಶ್ವರ ಮೆಡ್ಲೇರಿ ಅಧ್ಯಕ್ಷತೆ ವಹಿಸುವರು. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ನಿಜಲಿಂಗಪ್ಪ ತೋಟದ, ಪ್ರಾಚಾರ್ಯ ಎನ್. ಕೆ. ಹತ್ತಿಕಾಳ, ಗ್ರಾ.ಪಂ ಉಪಧ್ಯಕ್ಷ ಎಂ.ಎಸ್. ಪಾಟೀಲ, ಗೀತಾ ಪೂಜಾರ, ಬಿ.ಎಚ್. ನಡುವಿನಮನಿ, ಅಶೋಕ ಸೊರಟೂರ, ಬಸವರಾಜ ಸಂಶಿ, ಶಿವಾನಂದ ಮಾಯಪ್ಪನವರ ಸೇರಿದಂತೆ ಕಸಾಪ ಪದಾಧಿಕಾರಿಗಳು, ಗ್ರಾ.ಪಂ ಸದಸ್ಯರು, ಶಿಕ್ಷಕರು, ಸಾಹಿತಿಗಳು ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಡಿ. 25 ರಂದು ಹೋರಾಟದ ಪೂರ್ವಬಾವಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಗಂಗಾಪೂರ ಪೇಟೆಯಿಂದ ಅಂಬೇಡ್ಕರ್ ನಗರದ ಮೂಲಕ ಎಸ್.ಎಂ.ಕೃಷ್ಣ ನಗರಕ್ಕೆ ಹಾದು ಹೋಗುವ ಮಾರ್ಗದಲ್ಲಿ ಅರ್ಧಕ್ಕೆ ನಿಂತಿರುವ ರೈಲ್ವೆ ಬ್ರಿಡ್ಜ್ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಆಗ್ರಹಿಸಿ ರೈಲ್ವೆ ಅಧಿಕಾರಿಗಳಿಗೆ ಮನವಿ ನೀಡುವುದು ಮತ್ತು ಮುಂದಿನ ಹೋರಾಟದ ಕುರಿತು ಚರ್ಚಿಸಲು ಇದೇ. ಡಿ. 25 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ಗಂಗಾಪೂರ ಪೇಟೆಯ ಶ್ರೀ ದುರ್ಗಾದೇವಿ ದೇವಸ್ಥಾನದ ಆವರಣದಲ್ಲಿ ಸಭೆ ಕರೆಯಲಾಗಿದೆ. ಈ ಸಭೆಗೆ ಬೆಟಗೇರಿ ರೈಲ್ವೆ ಹೋರಾಟ ಸಮಿತಿಯ ಅಧ್ಯಕ್ಷ ಗಣೇಶಸಿಂಗ್ ಬ್ಯಾಳಿ ಹಾಗೂ ಸದಸ್ಯರು ಆಗಮಿಸುವರು.

ಅದ್ದರಿಂದ ಈ ಸಭೆಗೆ ರೈತರು, ಗುರು–ಹಿರಿಯರು, ಗಂಗಾಪೂರ ಪೇಟೆ ಹಾಗೂ ಎಸ್.ಕೃಷ್ಣ ನಗರದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ರೈತ ಸಂಘದ ಅಧ್ಯಕ್ಷ ಬಸವರಾಜ ಕವಳಿಕಾಯಿ, ಉಪಾಧ್ಯಕ್ಷ ಬಸವರಾಜ ಬೆಳದಡಿ, ರೈತ ಹಿತಾಭಿವೃದ್ಧಿ ಸಂಘದ ಕಾರ್ಯದರ್ಶಿ ಪರಮೇಶ್ವರಪ್ಪ ಜಂತ್ಲಿ, ರೈತ ಸಂಘದ ಕಾರ್ಯದರ್ಶಿ ಮೋಹನ ಇಮರಾಪೂರ, ಯುವ ಮುಖಂಡ ಅನಿಲ್ ಸಿದ್ದಮ್ಮನಹಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ. ಮಹೇಶ ನಾಲವಾಡ ಫೌಂಡೇಶನ್‌ನಿಂದ ವಿದ್ಯಾರ್ಥಿಗಳಿಗೆ ಕಾಶ್ಯಪ್ ಪುಸ್ತಕ ವಿತರಣೆ

ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ತರಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸರಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷಾ ಅಭ್ಯಾಸಕ್ಕೆ ಸಹಕಾರಿಯಾಗುವ ಮಾದರಿ ಮತ್ತು ಉತ್ತರ ಸಹಿತ ಬೋರ್ಡ್ ಪ್ರಶ್ನೆ ಪತ್ರಿಕೆಗಳುಳ್ಳ ಕಾಶ್ಯಪ್ ಪುಸ್ತಕವನ್ನು ಉಚಿತವಾಗಿ ವಿತರಿಸುತ್ತಿದ್ದೇವೆ ಎಂದು ಡಾ. ಮಹೇಶ ನಾಲವಾಡ ಫೌಂಡೇಶನ್ ಅಧ್ಯಕ್ಷ ಡಾ. ಮಹೇಶ ನಾಲವಾಡ ಹೇಳಿದರು.

ಅವರು ಶುಕ್ರವಾರ ನಗರದ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯ 177 ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳನ್ನು ವಿತರಿಸಿ ಮಾತನಾಡಿದರು.

ಸರಕಾರ ಮಕ್ಕಳ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಕೊಂಡಿದೆ. ಸರಕಾರದೊಂದಿಗೆ ನಮ್ಮ ಸಂಸ್ಥೆಯು ಮಕ್ಕಳ ಪರೀಕಾ ಫಲಿತಾಂಶದಲ್ಲಿ ಉತ್ತಮ ಪರಿಣಾಮ ತರಲು ಸಹಕಾರಿಯಾಗಲೆಂದು

ಶಿಕ್ಷಣ ತಜ್ಞರ ಸಲಹೆಯೊಂದಿಗೆ ಈ ಪುಸ್ತಕವನ್ನು ತಯಾರಿಸಲಾಗಿದ್ದು ಇದರ ಸದುಪಯೋಗ ಎಲ್ಲ ಮಕ್ಕಳಿಗೂ ಸಿಗಲಿ ಎಂದರು.

ಗದಗ ಡಿಡಿಪಿಐ ಎಂ.ಎ ರಡ್ಡೇರ ಮಾತನಾಡಿ, ಈ ಪುಸ್ತಕದ ಸದುಪಯೋಗದೊಂದಿಗೆ ಮಕ್ಕಳಿಗೆ ಸಹಾಯಕವಾಗುವಂತೆ ಶಿಕ್ಷಕರು ಪಾತ್ರ ನಿರ್ವಹಿಸಬೇಕಾಗಿದೆ. ಮಕ್ಕಳು ಹೇಗೆ ಓದಬೇಕು ಎಂದರೆ, ಓದಿ

> 10ನೇ ತರಗತಿ ವಿದ್ಯಾರ್ಥಿ ಜೀವನದ ಬಹುಮುಖ್ಯ ಘಟ್ಟವಾಗಿದೆ. ವಿದ್ಯಾರ್ಥಿ ಮತ್ತು ಪಾಲಕರಲ್ಲಿರುವ ಕುತೂಹಲ ಹಾಗೂ ಆತಂಕ ದೂರಗೊಳಿಸುವ ನಿಟ್ಟಿನಲ್ಲಿ ಈ ಪುಸ್ತಕ ಸಹಕಾರಿಯಾಗಲಿದೆ. ಉತ್ತರ ಸಹಿತ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳು ಸಹಜವಾಗಿ ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಸಿದ್ಧಗೊಳಿಸಲಾಗಿದೆ ಎಂದು ಮಹೇಶ ನಾಲವಾಡ ನುಡಿದರು.

ಸಂಗ್ರಹಿಸಿ, ನಂತರ ತಿಳಿದುಕೊಂಡು, ಅದನ್ನು ಪುನಃ ಪ್ರಕಟಿಸಬೇಕು. ಇದರಿಂದ ಮಕ್ಕಳ ನೆನಪಿನ ಶಕ್ತಿ ಹೆಚ್ಚುತ್ತದೆ. ಇದರಿಂದ ಪರೀಕ್ಷಾ ಫಲಿತಾಂಶ ಉತ್ತಮವಾಗುವುದರಲ್ಲಿ ಸಂಶಯವಿಲ್ಲ ಎಂದರು.

ಪೂಜ್ಯ ಶ್ರೀ ಕಲ್ಲಯ್ಯಜ್ಜನವರು ಮಾತನಾಡಿ, ಮಹೇಶ ನಾಲವಾಡ ಫೌಂಡೇಶನ್ ವತಿಯಿಂದ 45 ಸಾವಿರ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು. ಬಸವರಾಜ ಧಾರವಾಡ ಮಾತನಾಡಿ, ಈ ಪುಸ್ತಕ ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಪರಿಣಾಮಕಾರಿಯಾಗಿ ತಯಾರಾಗಲು, ಉತ್ತಮ ಫಲಿತಾಂಶ ತರಲು ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಬಸಣ್ಣ ಗಾಣಿಗೇರ, ಅಖಿಲ ಹಲಗತ್ತಿ, ಕೆ.ಪಿ.ಕೋಟಿಗೌಡರ ವಕೀಲರು, ರಾಜೇಂದ್ರ ಹೊಂಗಲ್, ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸೈಂಟ್ ಜೋಸೆಫ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ

ಮಕ್ಕಳ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಪ್ರಸ್ತುತ ದಿನಮಾನದಲ್ಲಿ ಪ್ರತಿಯೊಬ್ಬರಿಗೂ ಶಿಕ್ಷಣ ಅವಶ್ಯ. ಪಾಲಕರು ತಮ್ಮ ಮಕ್ಕಳನ್ನು ತಪ್ಪದೇ ಶಾಲೆಗಳಿಗೆ ಕಳುಹಿಸಬೇಕು. ಶೈಕ್ಷಣಿಕ ಪ್ರಗತಿಯಾದರೆ ಭವ್ಯ ಭಾರತದ ಭವಿಷ್ಯ ಉಜ್ವಲವಾಗಲಿದೆ ಎಂದು ತಹಸೀಲ್ದಾರ ಅನಿಲ ಬಡಿಗೇರ ಹೇಳಿದರು.

ಅವರು ಶಿರಹಟ್ಟಿಯಲ್ಲಿ ಕರ್ನಾಟಕ ಕ್ರೈಸ್ತ ಎಜ್ಯುಕೇಶನಲ್ ಚಾರಿಟೇಬಲ್ ಟ್ರಸ್ಟ್‌ನ ಸೈಂಟ್ ಜೋಸೆಫ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ 2023–24ನೇ ಸಾಲಿನ ಶಾಲಾ ವಾರ್ಷಿಕೋತ್ಸವ ಹಾಗೂ ಕ್ರಿಸ್‌ಮಸ್ ಹಬ್ಬದ ಕಾರ್ಯಕ್ರಮವನ್ನು ಕೇಕ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಪ್ರಥಮ ಆದ್ಯತೆಯನ್ನು ನೀಡಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕು. ಶಾಲೆಗಳಲ್ಲಿ ಶಿಕ್ಷಕರು ಸಹ ಮಕ್ಕಳ ಮನಸ್ಸನ್ನು ಅರಿತು ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು. ನಮ್ಮ

> ಸದೃಢ ದೇಶ ನಿರ್ಮಾಣವಾಗುವುದಕ್ಕೆ ಮಕ್ಕಳು, ಪಾಲಕರು ಮತ್ತು ಶಿಕ್ಷಕರು ಈ ಮೂರು ಹಂತಗಳು ಸಮ್ಮಿಳಿತವಾಗಿ ತಮ್ಮ ತಮ್ಮ ಕೆಲಸ–ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಬೇಕು. ಮಕ್ಕಳು ಶಾಲೆಗಳಲ್ಲಿ ಶಿಕ್ಷಕರು ಬೋಧಿಸುವ ಪಾಠ ಪ್ರವಚನಗಳನ್ನು ಆಲಿಸಿ, ಸತತವಾಗಿ ಮನನ ಮಾಡುವುದರ ಮೂಲಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಅನಿಲ ಬಡಿಗೇರ ಹೇಳಿದರು.

ತಾಲೂಕಿನ ವಿದ್ಯಾರ್ಥಿಗಳು ಜಿಲ್ಲೆ ಹಾಗೂ ತಾಲೂಕಿಗೆ ಕೀರ್ತಿ ತರುವಂತವರಾಗಿ ಹೊರಹೊಮ್ಮ ಬೇಕೆಂದು ಹೇಳಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಎನ್. ಎಚ್. ಓಲೇಕಾರ ಮಾತನಾಡಿ, ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿ ಯಾಗಬೇಕಾದರೆ ಅವರಿಗೆ ಒಳ್ಳೇಯ ಶಿಕ್ಷಣವನ್ನು ನೀಡಬೇಕು. ಸಂಸ್ಥೆಯು ಆ ಕೆಲಸವನ್ನು ನಿರಂತರ ವಾಗಿ ಮಾಡುತ್ತಾ ಬಂದಿದೆ ಎಂದರು.

ಶಿಗ್ಗಾಂವನ ಎಫ್‌ಎಂಪಿಬಿ ಚರ್ಚನ ಸುನೀಲಕುಮಾರ ಹುಣಸಿಹಾಳ ಕ್ರಿಸ್‌ಮಸ್ ಸಂದೇಶ ನೀಡಿದರು. ಅಧ್ಯಕ್ಷತೆಯನ್ನು ಶಾಲೆಯ ಅಧ್ಯಕ್ಷ ಎಸ್.ಎಸ್. ಸಾಮ್ರಾಟ್ ವಹಿಸಿದ್ದರು. ನಂತರ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಪಿಎಸ್‌ಐ ಈರಪ್ಪ ರಿತ್ತಿ, ಪ.ಪಂ ಮುಖ್ಯಾಧಿಕಾರಿ ಎಸ್. ಆರ್. ಕಟ್ಟಿಮನಿ, ಜಿಲ್ಲಾ ಭಾವಸಾರ ಸಮಾಜದ ಅಧ್ಯಕ್ಷ ಡಾ. ಟಿ.ಎಂ. ಮಹೇಂದ್ರಕರ, ಪ.ಪಂ ಸದಸ್ಯ ಹೊನ್ನಪ್ಪ ಶಿರಹಟ್ಟಿ, ದೇವಪ್ಪ ಆಡೂರ, ಮಹಬೂಬಸಾಬ ಲಕ್ಷ್ಮೇಶ್ವರ, ಅಕ್ಬರಸಾಬ ಯಾದಗಿರಿ ಮುಂತಾದವರು ಉ

ಸಂಪಾದಕೀಯ

ಅವರು ಮಾಡಿದಂತೆ ನೀವು ಮಾಡಬೇಡಿ

ಬರ ಪರಿಹಾರ ಕೋರಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಿಎಂ ಸಿದ್ದರಾಮಯ್ಯ, ಸಚಿವರಾದ ಕೃಷ್ಣ ಭೈರೇಗೌಡ ಮತ್ತು ಜಮೀರ್ ಅಹ್ಮದ್ ಖಾನ್ ಮನವಿ ಸಲ್ಲಿಸಿ, ದೆಹಲಿಯಿಂದ ಬೆಂಗಳೂರಿಗೆ ವಾಪಸಾಗಿದ್ದಾರೆ. ಅದು ವಿಶೇಷ ಐಷಾರಾಮಿ ಜೆಟ್ ವಿಮಾನದಲ್ಲಿ. ಸಚಿವ ಜಮೀರ್ ಅಹ್ಮದ್ ಖಾನ್ ತಮ್ಮ ಪ್ರಯಾಣದ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವುದು ಈಗ ವಿವಾದ ಎನ್ನುವುದಕ್ಕಿಂತ ಪ್ರತಿಪಕ್ಷಗಳ ಟೀಕೆಗೆ ಆಹಾರವಾಗಿ ಪರಿಣಮಿಸಿದೆ.

ಮುಖ್ಯವಾಗಿ ಜಮೀರ್ ಅಹ್ಮದ್ ಖಾನ್ ಅವರಿಗೆ ಯಾವುದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಬೇಕು ಎನ್ನುವ ಪ್ರಜ್ಞೆಯೇ ಇಲ್ಲ. ಕೇಂದ್ರ ಸರಕಾರದಿಂದ, ಪ್ರಧಾನಿ ನರೇಂದ್ರ ಮೋದಿ ಅವರಿಂದ ಬರ ಪರಿಹಾರಕ್ಕೆ ಅನುದಾನ ಕೋರಿದ್ದನ್ನು ರಾಜ್ಯದ ಜನರಿಗೆ ತಿಳಿಸುವುದಕ್ಕಿಂತ, ತಾವು ಐಷಾರಾಮಿ ವಿಮಾನದಲ್ಲಿ ಪ್ರಯಾಣಿಸಿದ್ದನ್ನು ತೋರಿಸುವ ಖಯಾಲಿಯೇ ಇಷ್ಟೊಂದು ವಿವಾದಕ್ಕೆ ಕಾರಣವಾಗಿರುವುದು. ಜಮೀರ್ ಅಹ್ಮದ್ ಖಾನ್ ಇಂಥ ವಿವಾದಗಳಿಗೆ ಕಾರಣವಾಗುವುದು ಇದೇ ಮೊದಲೇನಲ್ಲ.

ಇರಲಿ, ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಪಕ್ಷಗಳ ಟೀಕೆಗೆ ಪ್ರತ್ಯುತ್ತರ ನೀಡಿದ ಪರಿ ಸಮಂಜಸವಾಗಿಲ್ಲ. ಐಷಾರಾಮಿ ವಿಮಾನ ಪ್ರಯಾಣವನ್ನು ಸಿಎಂ ಸಮರ್ಥಿಸಿದ್ದಾರೆ. ಸಮರ್ಥನೆಗೆ ಯಾವುದೇ ಕಾರಣ ನೀಡದೆ, ಪ್ರಧಾನಿ ನರೇಂದ್ರ ಮೋದಿ ಯಾವ ವಿಮಾನದಲ್ಲಿ ಪ್ರಯಾಣಿಸುತ್ತಾರೆ. 60 ಆಸನದ ವಿಮಾನದಲ್ಲಿ ಒಬ್ಬರೆ ಪ್ರಯಾಣಿಸುತ್ತಾರೆ ಎಂದೆಲ್ಲಾ ಟೀಕೆ ಮಾಡಿದ್ದಾರೆ.

ಸರಿ, ಪ್ರಧಾನಿ ನರೇಂದ್ರ ಮೋದಿ 60 ಆಸನದ ದೊಡ್ಡ ವಿಮಾನದಲ್ಲಿ ಪ್ರಯಾಣಿಸುತ್ತಾರೆ ಎಂದ ಮಾತ್ರಕ್ಕೆ, ನೀವು ಸಹ ಐಷಾರಾಮಿ ವಿಮಾನದಲ್ಲಿ ಪ್ರಯಾಣಿಸಬಹುದಾ? ಅವರು ದುಂದುವೆಚ್ಚ ಮಾಡುತ್ತಾರೆ ಎನ್ನುವುದು ನಿಮ್ಮ ಅಭಿಪ್ರಾಯ ಆದರೆ ನೀವು ಮಾಡಿದ್ದು ದುಂದುವೆಚ್ಚ ಅಲ್ಲವೇ? ದುಂದುವೆಚ್ಚ ಪ್ರಧಾನಿ ಮಾಡಿದರೂ ಅಷ್ಟೆ, ಮುಖ್ಯಮಂತ್ರಿ ಮಾಡಿದರೂ ಅಷ್ಟೆ ಎನ್ನುವುದನ್ನು ಸಮಾಜವಾದಿ ಸಿಎಂ ಸಿದ್ದರಾಮಯ್ಯ ಅರ್ಥ ಮಾಡಿಕೊಳ್ಳಬೇಕು.

ಬಡವರ ಪರ ಚಿಂತನೆ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನೊಬ್ಬರ ಅನುಕರಣೆ, ಪ್ರಧಾನಿ ಮಾಡಿದ್ದಾರೆ ಎನ್ನುವ ಸಬೂಬು ನೀಡುವುದು ಸರಿಯಲ್ಲ. ಸಿದ್ದರಾಮಯ್ಯ ಅನೇಕ ಒಳ್ಳೆಯ ಕಾರ್ಯಕ್ರಮಗಳ ಮೂಲಕ ಮಾದರಿಯಾಗಿದ್ದಾರೆ. ಹಾಗೆಯೇ ತಮ್ಮ ನಡೆ-ನುಡಿಗಳಿಂದಲೂ ಮಾದರಿಯಾಗಬೇಕು. ದುಂದುವೆಚ್ಚಕ್ಕೆ ಕಡಿವಾಣ ಹಾಕುವ ಮೂಲಕ ಒಳ್ಳೆಯ ಸಂಪ್ರದಾಯಕ್ಕೆ ನಾಂದಿ ಹಾಡಬೇಕು. ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರೆ ಸಿದ್ದರಾಮಯ್ಯ ನಡೆ ಅನುಕರಣೆ ಮಾಡುವಂಥ ಕೆಲಸ ಮಾಡಬೇಕು. ಭವಿಷ್ಯದಲ್ಲಾದರೂ ಅಂಥ ನಡೆ ಪ್ರದರ್ಶಿಸಲಿ.

ಕೃಷಿ ಭಾಗ್ಯ ಯೋಜನೆಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ರೋಣ

ಮಳೆಯಾಶ್ರಿತ ಕೃಷಿ ನೀತಿಯನ್ವಯ ಕೃಷಿ ಭಾಗ್ಯ ಯೋಜನೆಗೆ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ರೈತರು ಕ್ಷೇತ್ರ ಬದು, ಕೃಷಿ ಹೊಂಡ, ತಂತಿ ಬೇಲಿ, ಡೀಸೆಲ್ ಪಂಪ್‌ಸೆಟ್ ಹಾಗೂ ಸೂಕ್ಷ್ಮ ನೀರಾವರಿ ಅನುಷ್ಠಾನಗೊಳಿಸುವುದು ಕಡ್ಡಾಯವಾಗಿದೆ. ಈ ಹಿಂದೆ ಈ ಯೋಜನೆಗಳ ಲಾಭ ಪಡೆದುಕೊಂಡಿರುವ ರೈತರನ್ನು ಅರ್ಹರೆಂದು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಳನ್ನು ಸಮೀಪದ ರೈತ ಸಂಪರ್ಕ ಕೇಂದ್ರಗಳಲ್ಲಿ ಡಿ.30ರೊಳಗೆ ಪಡೆದುಕೊಳ್ಳಬೇಕು ಎಂದು ಸಹಾಯಕ ನಿರ್ದೇಶಕ ರವೀಂದ್ರ ಪಾಟೀಲ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಎಸ್.ಎಸ್.ಪಿ. ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2023-24ನೇ ಸಾಲಿಗೆ ಹೊಸದಾಗಿ ಮತ್ತು ನವೀಕರಣಕ್ಕೆ 1 ರಿಂದ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವರ್ಗದವರು ಎಸ್.ಎಸ್.ಪಿ. ವಿದ್ಯಾರ್ಥಿ ವೇತನಕ್ಕಾಗಿ https://ssp.postmatric.karnataka.gov.in/ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ಈ ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಡಿ. 31 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕ ಮಾಹಿತಿ ಕೇಂದ್ರಗಳನ್ನು ಸಂಪರ್ಕಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಮಿತ್ ಬಿದರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಮಾಹಿತಿ ಕೇಂದ್ರ ಗದಗ, ಶಿರಹಟ್ಟಿ-9591705863,ಮುಂಡರಗಿ- 9916689778, ನರಗುಂದ-9901501170, ರೋಣ-9964490088 ಸಂಪರ್ಕಿಸಬಹುದಾಗಿದೆ.

ರೈತ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಈಗಾಗಲೇ ಪ್ರಾರಂಭವಾಗಿದ್ದು, ರೈತರು ತಾವು ಬೆಳೆದ ಬೆಳೆಗಳ ವಿವರಗಳನ್ನು ತಾವೇ ಖುದ್ದಾಗಿ ಗೂಗಲ್ ಪ್ಲೇಸ್ಟೋರ್‌ನಿಂದ "ಹಿಂಗಾರು ರೈತರ ಬೆಳೆ ಸಮೀಕ್ಷೆ 2023" ನ್ನು ಡೌನ್‌ಲೋಡ್ ಮಾಡಿಕೊಂಡು ಬೆಳೆ ವಿವರಗಳನ್ನು ದಾಖಲಿಸಬೇಕಾಗಿದೆ.

ಹೀಗೆ ವಿವರಗಳನ್ನು ದಾಖಲಿಸುವದರಿಂದ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆ, ಬೆಳೆ ವಿಮೆ ಯೋಜನೆ, ಬರಗಾಲ ಮತ್ತು ಪ್ರವಾಹ ಸಂದರ್ಭದಲ್ಲಿ ನಷ್ಟ ಪರಿಹಾರ ಪಡೆಯಲು, ಪಹಣಿಯಲ್ಲಿ ಬೆಳೆ ವಿವರಗಳನ್ನು ದಾಖಲಿಸಲು ಮತ್ತು ಬೆಳೆಸಾಲ ಪಡೆಯುವಲ್ಲಿ ರೈತರಿಗೆ ಅನುಕೂಲವಾಗುವದರಿಂದ ಎಲ್ಲ ರೈತರು ಬೆಳೆ ವಿವರಗಳನ್ನು ತ್ವರಿತವಾಗಿ ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ದಾಖಲಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು.

ರೈತರು ಬೆಳೆ ವಿವರಗಳನ್ನು ಅಪ್‌ಲೋಡ್ ಮಾಡದಿದ್ದಲ್ಲಿ ಮೇಲೆ ತಿಳಿಸಿದ ಸರ್ಕಾರದ ಯೋಜನೆಗಳ ಲಾಭದಿಂದ ವಂಚಿತರಾಗುವ ಸಾಧ್ಯತೆ ಇರುವುದರಿಂದ ರೈತರು ಇದನ್ನು ಗಂಭೀರವಾಗಿ ಪರಿಗಣಿಸಿ ತುರ್ತಾಗಿ ವಿವರಗಳನ್ನು ದಾಖಲಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರಾದ ತಾರಾಮಣಿ ಜಿ. ಹೆಚ್. ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ರೈತರು ತಮ್ಮ ಗ್ರಾಮದ ಖಾಸಗಿ ನಿವಾಸಿಗಳು, ಕಂದಾಯ/ಕೃಷಿ/ತೋಟಗಾರಿಕೆ/ರೇಷ್ಮೆ ಇಲಾಖೆಗಳ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಇಂದು ಮೋಕ್ಷದಾ ಏಕಾದಶಿ, ಗೀತಾ ಜಯಂತಿ ಆಚರಣೆಯ ನಿಮಿತ್ತ ವಿಶೇಷ ಲೇಖನ

ಭಗವದ್ಗೀತೆಯೆಂಬ ಸಾರ್ವಕಾಲಿಕ ದಿವ್ಯೌಷಧ

ಶ್ರೀ ಕೃಷ್ಣ ಪರಮಾತ್ಮನಿಂದ ಬೋಧಿಸಲ್ಪಟ್ಟ ಭಗವದ್ಗೀತೆಯ ಸಂದೇಶಗಳು ಮನುಕುಲಕ್ಕೆ ಮೌಲ್ಯಯುತ ಹಾಗೂ ಶಾಂತಿಯುತ ಜೀವನ ನಿರ್ವಹಣೆಗೆ ದಾರಿದೀಪವಾಗಿವೆ. ಗೀತೆಯಲ್ಲಿನ ಶ್ಲೋಕಗಳು ವ್ಯಕ್ತಿಯ ಜೀವನವನ್ನು ಅರ್ಥಪೂರ್ಣ ಮತ್ತು ಯಶಸ್ವಿಗೊಳಿಸುವಲ್ಲಿ ಪರಿಣಾಮಕಾರಿಯಾಗಿವೆ. ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಧರ್ಮ-ಕರ್ಮದ ಜ್ಞಾನವನ್ನು ಗೀತಾ ಬೋಧನೆಯ ಮೂಲಕ ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಕಾರ್ಯವನ್ನು ಮಾಡಿದ. ಮಹಾಭಾರತದ ಯುದ್ಧದ ಸಮಯದಲ್ಲಿ ಶ್ರೀ ಕೃಷ್ಣನು ಒಬ್ಬ ಮನೋವೈದ್ಯನಾಗಿ, ತತ್ವಜ್ಞಾನಿಯಾಗಿ, ಉಪದೇಶಕನಾಗಿ, ಧರ್ಮರಕ್ಷಕನಾಗಿ, ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತಾನೆ.

ಕುರುಕ್ಷೇತ್ರದಲ್ಲಿ ಪಾಂಡವರ ಕೌರವರ ಮಧ್ಯೆ ಇನ್ನೇನು ಯುದ್ಧ ಪ್ರಾರಂಭವಾಗಬೇಕು ಎನ್ನುವ ಸಮಯದಲ್ಲಿ ಅರ್ಜುನ ತನ್ನ ಸಾರಥಿಯಾದ ಶ್ರೀ ಕೃಷ್ಣನಿಗೆ, ತಾನು ಯಾರೊಡನೆ ಯುದ್ಧ ಮಾಡಬೇಕಾಗಿದೆಯೋ ಆ ಸೈನ್ಯದ ಮಧ್ಯದಲ್ಲಿ ರಥವನ್ನು ನಿಲ್ಲಿಸು, ಅವರನೆಲ್ಲ ನೋಡುತ್ತೇನೆ ಎಂದು ಕೇಳಿಕೊಂಡಾಗ ಅವನು ರಥವನ್ನು ಮಧ್ಯೆ ನಿಲ್ಲಿಸುತ್ತಾನೆ. ಅಲ್ಲಿ ಎದುರಿಗಿರುವ ಪಿತಾಮಹ ಭೀಷ್ಮಾಚಾರ್ಯರನ್ನು, ಗುರುಗಳಾದ ದ್ರೋಣಾಚಾರ್ಯರನ್ನು, ತನ್ನ ದಾಯಾದಿಗಳನ್ನು ಸೇರಿದಂತೆ ಬಂಧು-ಬಾಂಧವರನ್ನು ನೋಡುತ್ತಾನೆ.

ಆಗ ಅರ್ಜುನನು ತನ್ನ ಬಂಧು-ಬಾಂಧವರೊಂದಿಗೆ ಯುದ್ಧ ಮಾಡಲು ಹಿಂದೇಟು ಹಾಕುತ್ತಾನೆ. ಇವರನ್ನೆಲ್ಲ ಕೊಂದು ನಾನು ಗೆಲುವನ್ನು ಪಡೆಯಬೇಕಾಗುತ್ತದೆ. ಲಕ್ಷಾಂತರ ಜನರು ಯುದ್ಧದಲ್ಲಿ ಹತರಾಗುತ್ತಾರೆ. ನಾನು ಜಯಿಸಬೇಕಾದರೆ ಇಷ್ಟೊಂದು ಪಾಪ ಮಾಡಬೇಕಾಗುತ್ತದೆ. ಇದರಿಂದ ನಾನು ಯುದ್ಧ ಮಾಡುವುದಿಲ್ಲ ಎನ್ನುತ್ತಾನೆ. ಆಗ ಕೃಷ್ಣನು ಇದು ಬರೀ ದಾಯಾದಿಗಳ ನಡುವಿನ ಯುದ್ಧವಲ್ಲ. ಧರ್ಮಕ್ಕೂ ಅಧರ್ಮಕ್ಕೂ ಆಗುತ್ತಿರುವ ಯುದ್ಧ. ನೀನು ಗೆಲ್ಲಬೇಕೆಂದು ಯುದ್ಧ ಮಾಡಬೇಡ. ಯುದ್ಧ ಮಾಡುವುದು ನಿನ್ನ ಕರ್ತವ್ಯವಾಗಿದೆ ಎಂದು ಅರ್ಜುನನಿಗೆ ಭಗವದ್ಗೀತೆಯ ಮೂಲಕ ಉಪದೇಶಿಸಿ ಅವನಲ್ಲಿರುವ ಸಂದೇಹಗಳನ್ನು ತೊಡೆದು ಹಾಕಿ ನಾವು ಯಾವಾಗಲೂ ಕರ್ತವ್ಯದಿಂದ ವಿಮುಖವಾಗಬಾರದು ಎಂದು ತಿಳಿಸುತ್ತಾನೆ.

ಕರ್ಮ ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರವಿದೆಯೇ ಹೊರತು ಅದರ ಫಲಿತಾಂಶ ನಿನ್ನ ಕೈಯ್ಯಲಿಲ್ಲ. ಕರ್ಮವು ಒಂದು ಕರ್ತವ್ಯವಾಗಿದ್ದು, ಪ್ರತಿಯೊಬ್ಬರೂ ಪ್ರಫಲಾಪೇಕ್ಷೆಯಿಲ್ಲದೆ, ಶ್ರದ್ಧೆಯಿಂದ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಬೇಕು. ಅದನ್ನು ಬಿಟ್ಟು ಹಿಂದೆ ಸರಿಯುವುದು ಯೋಗ್ಯವೆನಿಸುವುದಿಲ್ಲ. ಕರ್ತವ್ಯಗಳನ್ನು ನಿಭಾಯಿಸುವಾಗ ಲಾಭ ನಷ್ಟ, ಮಾನ, ಅಪಮಾನ, ಜಯ-ಅಪಜಯಗಳನ್ನು ಲೆಕ್ಕಿಸದೇ ಧರ್ಮ ಮತ್ತು ನ್ಯಾಯ ರಕ್ಷಣೆಗಾಗಿ ಪ್ರತಿಯೊಬ್ಬರೂ ಕರ್ಮಗಳನ್ನು ಮಾಡಬೇಕೆಂದು 2ನೇ ಅಧ್ಯಾಯ ಸಾಂಖ್ಯಯೋಗದಲ್ಲಿ ಶ್ರೀಕೃಷ್ಣನು ತಿಳಿಸಿಕೊಡುತ್ತಾನೆ.

ಅನನ್ಯನಾಗಿ ನನ್ನನ್ನು ಧ್ಯಾನಿಸುತ್ತಿರುವ ಯಾವ ಜನರು ಉಪಾಸನೆ ಮಾಡುತ್ತಾರೆಯೋ, ಅಂತಹ ನಿತ್ಯಯುಕ್ತರಾದ (ಭಕ್ತರ) ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ ಎಂದು ಶ್ರೀ ಕೃಷ್ಣನು 9ನೇ ಅಧ್ಯಾಯವಾದ 'ರಾಜ ವಿದ್ಯಾ ರಾಜಗುಹ್ಯ' ಯೋಗದಲ್ಲಿ ತಿಳಿಸುತ್ತಾನೆ.

ಭಗವಂತನ ಮೇಲಿನ ನಮ್ಮ ನಂಬಿಕೆಯಲ್ಲಿ ನಾವು ಎಂದೂ ವಿಚಲಿತರಾಗಬಾರದು. ಅದು ದೃಢವಾಗಿರಬೇಕು. ಗುರಿ ಕೇವಲ ಭಗವಂತನನ್ನು ಸೇರುವತ್ತ ಇರಬೇಕು. ಭಗವಂತ ಏನು ಕೊಟ್ಟಿದ್ದಾನೆಯೋ ಅದೇ ಮಹಾ ಪ್ರಸಾದವೆಂದು ಸ್ವೀಕರಿಸಿ ಸಂಪೂರ್ಣ ಆತನಲ್ಲಿ ಶರಣಾಗಬೇಕು. ಇಂತಹ ಪರಿಸ್ಥಿತಿಯಲ್ಲಿ ನಮಗೆ ಎಂದೂ ದುಃಖವಾಗುವುದಿಲ್ಲ. ಬದುಕು ಆನಂದಮಯವಾಗಿರುತ್ತದೆ. ಜೀವನದಲ್ಲಿ ಏನೇ ಘಟನೆ ನಡೆದರೂ ಭಗವಂತನ ಚಿತ್ತದಂತೆ ಆಯಿತು ಎಂದು ತಿಳಿದು ಅದನ್ನು ಸಂತೋಷದಿಂದ ಸ್ವೀಕರಿಸುವ ಮನೋವೃತ್ತಿ ನಮ್ಮದಾಗಬೇಕು.

ಹೀಗೆ ಶ್ರೀ ಕೃಷ್ಣ ಪರಮಾತ್ಮನು 18 ಅಧ್ಯಾಯಗಳನ್ನೊಳಗೊಂಡ ಭಗವದ್ಗೀತೆಯನ್ನು ಅರ್ಜುನನಿಗೆ ಬೋಧಿಸಿ ಒಂದೊಂದು ಅಧ್ಯಾಯಗಳಲ್ಲಿಯೂ ಒಂದೊಂದು ರೀತಿಯ ಮೌಲ್ಯಯುತ ಸಂದೇಶಗಳನ್ನು ಮಾನವಕುಲಕ್ಕೆ, ಇಡೀ ಪ್ರಪಂಚಕ್ಕೆ ತಿಳಿಸಿಕೊಟ್ಟಿದ್ದಾನೆ.

ಭಗವದ್ಗೀತೆಯ ಸಂದೇಶವು ಕೇವಲ ಭಾರತದಲ್ಲಷ್ಟೇ ಸೀಮಿತವಾಗದೇ ಪ್ರಪಂಚದಾದ್ಯಂತ ಸಾರ್ವಕಾಲಿಕವಾಗಿದೆ. ಕೃಷ್ಣನಿಂದ ಬೋಧಿತವಾದ ಭಗವದ್ಗೀತೆಯ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಾಗ ಸಮಾಜದ ಪ್ರತಿ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಪ್ರಪಂಚದಲ್ಲಿ ಅಸೂಯೆ, ಭಯೋತ್ಪಾದನೆ, ಕ್ರೂರತನ, ಅಸಮಾಧಾನಗಳನ್ನು ಹೋಗಲಾಡಿಸಿ ಶಾಂತಿ, ಧರ್ಮ, ಸೌಹಾರ್ದಯುತ ಹಾಗೂ ಮೌಲ್ಯಯುತ ಜೀವನ ನಡೆಸಲು ಶ್ರೀ ಕೃಷ್ಣ ಪರಮಾತ್ಮನ ಭಗವದ್ಗೀತೆಯೆಂಬ ಔಷಧದ ಚಿಕಿತ್ಸೆಯು ಇಂದಿನ ಅತ್ಯಗತ್ಯವಾಗಿದೆ. ಸಮಾಜದ ಪ್ರತಿಯೊಂದು ಆಗು-ಹೋಗುಗಳಿಗೂ, ಸಮಸ್ಯೆಗಳಿಗೂ ಭಗವದ್ಗೀತೆಯ ಸಂದೇಶಗಳಿಂದ ಪರಿಹಾರ ಸಿಗುತ್ತದೆ. ಭಗವದ್ಗೀತೆಯಲ್ಲಿರುವ ಸಂದೇಶಗಳ ಪಾಲನೆಯಿಂದ ಪ್ರತಿಯೊಬ್ಬರೂ ಜೀವನದಲ್ಲಿ ಸಾರ್ಥಕತೆ ಪಡೆಯಬಹುದಾಗಿದೆ.

- ಅಂಜನಾ ರಾಘವೇಂದ್ರ ಕುಬೇರ.
ಗದಗ.

ಶ್ರೀ ತೋಂಟದಾರ್ಯ ಮಠದಲ್ಲಿ ಅವ್ವನ ನೆನಪಿನ ವಿಶೇಷ ಶಿವಾನುಭವ

ಹೆತ್ತವರ ಒಂಟಿತನ ದೂರ ಮಾಡೋಣ

ತಾಯಿಯ ಮಮತೆಯೆಂದರೇ ಹಾಗೆ. ಆಕೆ ತನಗೆ ಹತ್ತು ಮಕ್ಕಳಿದ್ದರೂ ಎಲ್ಲರಿಗೂ ಮಮತೆ ತೋರಿ ಸಾಕುವಳು. ಆದರೆ ಮಕ್ಕಳು ಹತ್ತು ಮಂದಿ ಇದ್ದರೂ ಒಬ್ಬ ತಾಯಿಯನ್ನು ಸಾಕಲು ಅವರೊಳಗೆ ಎಷ್ಟು ಒಳಜಗಳ!

ಇಂತಹ ಹೆತ್ತವರಿಂದು ತಮ್ಮ ಕೊನೆಯ ದಿನಗಳನ್ನು ಒಂಟಿತನದಿಂದ ಕಳೆಯುತ್ತಿದ್ದಾರೆ. ಎಲ್ಲೆಡೆ ವೃದ್ಧಾಶ್ರಮಗಳು ತಲೆ ಎತ್ತುತ್ತಿರುವುದು ಬೇಸರದ ಸಂಗತಿ. ಹೀಗಾದರೆ ಹೆತ್ತವರ ಮತ್ತು ಮಕ್ಕಳ ಬಾಂಧವ್ಯಕ್ಕೆ ಏನು ಬೆಲೆ ಎಂಬ ನೋವನ್ನು ಅರಿತ ಬಸವರಾಜ ಹೊರಟ್ಟಿಯವರು ಸಮಾಜದಲ್ಲಿ ಜಾಗೃತಿ ಮೂಡಿಸಲು ತಮ್ಮದೇ ಆದ ಅಳಿಲು ಸೇವೆ ಸಲ್ಲಿಸುತ್ತಿದ್ದಾರೆ.

ಇಂಥದೊಂದು ಭಾವನಾತ್ಮಕ ವೇದಿಕೆಯನ್ನು ಗದುಗಿನ ಜನತೆಗಾಗಿ ಇದೇ ಡಿ.25ರಂದು ಸಾಯಂಕಾಲ ತೋಂಟದಾರ್ಯ ಮಠದಲ್ಲಿ ಅವ್ವನ ಮಹತ್ವದ ಕುರಿತು ಅರಿವು ಮೂಡಿಸುವ ವಿಶೇಷ ಶಿವಾನುಭವ ಕಾರ್ಯಕ್ರಮ ಆಯೋಜಿಸುವ ಮೂಲಕ ಬಸವರಾಜ ಹೊರಟ್ಟಿ ನೇತೃತ್ವದ ಅವ್ವ ಸೇವಾ ಟ್ರಸ್ಟ್ ಹಾಗೂ ಶ್ರೀಮಠದ ಬಳಗ ಮುಂದಾಗಿದೆ.

ಹೆತ್ತವರು ಅನಾಥರಂತೆ ಬದುಕುವುದನ್ನು ಯಾವ ಸಮಾಜವೂ, ಯಾವು ಸಂಸ್ಕೃತಿಯೂ

ಮನ್ನಿಸುವುದಿಲ್ಲ. ಇದೊಂದು ಕಾನೂನಿನ ಮಾತಲ್ಲ. ಮಾನವೀಯತೆಯ ಮಾತು. ಹೆತ್ತವರೂ ಬದಲಾಗಬೇಕು. ಮಕ್ಕಳೂ ಬದಲಾಗಬೇಕು. ಹೆತ್ತವರು ಅನಾಥರಂತೆ ಬದುಕುವುದಕ್ಕೆ ಮಕ್ಕಳು ಆಸ್ಪದ ನೀಡುವುದು ಎಂದೂ ಕ್ಷಮೆಯಿರದ ಅಪರಾಧ.

ಇಂತಹ ತಾಯಿ-ತಂದೆಯ ಕುರಿತು ಯುವ ಪೀಳಿಗೆಗೆ ಜಾಗೃತಿ ಮೂಡಿಸದೇ ಹೋದರೆ ಬದುಕಿನಲ್ಲಿ ಸಂತಸಕ್ಕಿಂತ ಸಂಕಷ್ಟಗಳೇ ಹೆಚ್ಚಾಗುತ್ತವೆ. ಇಂತಹ ನೂರಾರು ಪ್ರಸಂಗಗಳು ನಿತ್ಯ ಸುದ್ದಿಯಾಗುತ್ತಿರುವುದು ಕಳವಳಕಾರಿ ಸಂಗತಿ. ಇದನ್ನರಿತ ಬಸವರಾಜ ಹೊರಟ್ಟಿಯವರು ತಮ್ಮ ತಾಯಿ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ, ಅವ್ವ ಸೇವಾ ಸಂಸ್ಥೆ ಹುಟ್ಟು ಹಾಕಿ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸಿ ಎಲ್ಲ ತಾಯಂದಿರ ಕುರಿತು ಅರಿವು ಮೂಡಿಸುವ ಪುಟ್ಟ ಹೆಜ್ಜೆಗಳನ್ನು ಇಡುವ ಮೂಲಕ ಸಮಾಜಮುಖಿ ಕೈಂಕರ್ಯದಲ್ಲಿ ತೊಡಗಿದ್ದಾರೆ.

ವಯಸ್ಸಾದ ತಂದೆ-ತಾಯಂದಿರ ಜೊತೆ ಮಕ್ಕಳು ಒಟ್ಟೊಟ್ಟಾಗಿ ಸಂತಸದಿಂದ ಕಾಲ ಕಳೆಯಬೇಕಾಗಿದೆ. ತಂದೆ-ತಾಯಂದಿರು ತಮ್ಮ ಕೊನೆಯ ದಿನಗಳನ್ನು ಅತ್ಯಂತ ಸಂತಸದಿಂದ ಕಳೆಯುವ ವಾತಾವರಣವನ್ನು ನಿರ್ಮಿಸಬೇಕಿದೆ. ಇಂತಹ ಹತ್ತಾರು ಕನಸುಗಳನ್ನು ಕಟ್ಟಿಕೊಂಡಿರುವ ಅವ್ವ ಸೇವಾ ಸಂಸ್ಥೆಯ ಬಳಗ ಕಳೆದ ದಶಕಗಳಿಂದ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ಸುಂದರ ಸಮಾಜ ಕಟ್ಟುವ ಕಾರ್ಯದಲ್ಲಿ ತೊಡಗಿದ್ದಾರೆ.

ಸುಂದರ, ಸ್ವಾಸ್ತ್ಯ ಸದೃಢ ಸಮಾಜ ಕಟ್ಟುವಲ್ಲಿ ಇಂತ

ಕಾರ್ತಿಕೋತ್ಸವದ ನಿಮಿತ್ತ ರಾಜ್ಯ ಮಟ್ಟದ ಪಗಡೆ ಸ್ಪರ್ಧೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬೆಟಗೇರಿ ಉಸಗಿನಗಟ್ಟಿ ಓಣಿಯಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಡಿ.25ರಂದು ಕಾರ್ತಿಕೋತ್ಸವ ಹಮ್ಮಿಕೊಳ್ಳಲಾಗಿದೆ. ಉತ್ಸವದ ಅಂಗವಾಗಿ ದೇವಸ್ಥಾನದ ಸೇವಾ ಸಮಿತಿ ವತಿಯಿಂದ ರಾತ್ರಿ 8 ಗಂಟೆಗೆ ರಾಜ್ಯ ಮಟ್ಟದ ಪಗಡಿ ಸ್ಪರ್ಧೆ ಹಮ್ಮಿಕೊಂಡಿದ್ದು, ಉದ್ಘಾಟಕರಾಗಿ ಶಿವಪ್ಪ ಬಸಲಿಂಗಪ್ಪ ಮಾನೇದ ಇವರು ಆಗಮಿಸುವರು. ಓಣಿಯ ಹಿರಿಯರಾದ ಈರಪ್ಪ ಜಂಗಣ್ಣವರ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ನಗರಸಭೆ ಸದಸ್ಯರಾದ ಇಮ್ತಿಯಾಜ ಶಿರಹಟ್ಟಿ, ಚಂದ್ರಶೇಖರಗೌಡ ಕರಿಸೋಮನಗೌಡ್ರ, ಲಕ್ಷ್ಮವ್ವ ಮಾರುತೆಪ್ಪ ಭಜಂತ್ರಿ, ಮಾಜಿ ಸದಸ್ಯ ಮಾಧವ ಗಣಾಚಾರಿ, ಓಣಿಯ ಹಿರಿಯರಾದ ಚಂದ್ರಶೇಖರ ಮುಳ್ಳಾಳ, ಮಲ್ಲೇಶಪ್ಪ ಉಪ್ಪಸಣ್ಣವರ, ಮಲ್ಲಿಕಾರ್ಜುನ ದೇವಸ್ಥಾನದ ಅಧ್ಯಕ್ಷ ಆನಂದ ಹೊಸಮನಿ ಉಪಸ್ಥಿತರಿರುವರು.

ರಾಜ್ಯ ಮಟ್ಟದ ಪಗಡಿ ಸ್ಪರ್ಧೆಯ ಪ್ರಥಮ ಬಹುಮಾನ ರೂ. 25,001, ದ್ವಿತೀಯ ಬಹುಮಾನ ರೂ. 15,001, ತೃತೀಯ ಬಹುಮಾ ರೂ. 10,001 ಕೊಡಲಾಗುವುದು. ಪ್ರವೇಶ ಶುಲ್ಕ ರೂ. 1,001 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಶೇಖಪ್ಪ ಲಗಳಿ-8762197923, ಮಲ್ಲಪ್ಪ ಮಾ.ಪಲ್ಲೇದ-9972013054, ಕಲ್ಯಾಣಪ್ಪ ಶಿ.ಬೆನಕಣ್ಣವರ-9663628436, ಬಸವರಾಜ ಖಾನಾಪೂರ-9008657436, ಆನಂದ ಮಾರನಬಸರಿ-9035112782 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಶ್ರೀ ತೋಂಟದಾರ್ಯ ಮಠದಲ್ಲಿ ಅವ್ವ ಸೇವಾ ಟ್ರಸ್ಟ್ ವತಿಯಿಂದ ಕಾರ್ಯಕ್ರಮ

ಅವ್ವನ ನೆನಪಿನ 'ಶಿವಾನುಭವ' ಡಿ.25ಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ನೇತೃತ್ವದ 'ಅವ್ವ ಸೇವಾ ಟ್ರಸ್ಟ್' ದಶಕಗಳಿಂದಲೂ ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡುವುದರ ಜೊತೆಗೆ ಅವ್ವನ ಮಹತ್ವದ ಕುರಿತು ಜಾಗೃತಿ ಮೂಡಿಸುತ್ತಾ ಬಂದಿದೆ. ತಮ್ಮ ತಾಯಿಯ ನೆಪದಲ್ಲಿ ಇಡೀ ನಾಡಿನ ತಾಯಂದಿರನ್ನು ನೆನೆಯುವ ಹಾಗೂ ಗೌರವಿಸುವ ಕಾರ್ಯಕ್ರಮವನ್ನು ಅವ್ವ ಸೇವಾ ಟ್ರಸ್ಟ್ ಮಾಡುವ ಮೂಲಕ ನಾಡಿನ ಜನರ ಹೃದಯದಲ್ಲಿ ವಿಶೇಷ ಸ್ಥಾನ ಪಡೆದಿದೆ.

ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಶ್ರೀ ತೋಂಟದಾರ್ಯ ಮಠದಲ್ಲಿ ಡಿ.25ರಂದು ಸಾಯಂಕಾಲ 7 ಗಂಟೆಗೆ ಲಿಂಗಾಯತ ಪ್ರಗತಿಶೀಲ ಸಂಘ, ಯಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಡಂಬಳ-ಗದಗ ಹಾಗೂ ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್ ಆಶ್ರಯದಲ್ಲಿ ಅವ್ವನ ಕುರಿತು

ವಿಶೇಷ ಶಿವಾನುಭವ ಆಯೋಜಿಸುವ ಮೂಲಕ ನಾಡಿನ ತಾಯಂದಿರನ್ನು ನೆನೆಯುವ ಹಾಗೂ ಗೌರವಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ದಿವ್ಯ ಸಾನ್ನಿಧ್ಯವನ್ನು ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಶ್ರೀ.ಮ.ನಿ.ಪ್ರ. ಜಗದ್ಗುರು ಡಾ.ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ವಹಿಸುವರು. ಮುಖ್ಯ ಅತಿಥಿಗಳಾಗಿ ಅವ್ವ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಶರಣ ಸಭಾಪತಿ ಬಸವರಾಜ ಹೊರಟ್ಟಿ, ಅವ್ವ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಶರಣ ಶಶಿ ಸಾಲಿ, ಟ್ರಸ್ಟ್‌ನ ಗದಗ ಜಿಲ್ಲಾ ಸಂಚಾಲಕ ಶರಣ ಡಾ. ಬಸವರಾಜ ಧಾರವಾಡ ಭಾಗವಹಿಸಲಿದ್ದಾರೆ. ಅವ್ವನ ಕುರಿತು ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರದ ಶಿಕ್ಷಕಿ ಸಂಜೀವಿನಿ ಕೂಲಗುಡಿ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ದಾಸೋಹ ಸೇವೆಯನ್ನು ಶರಣೆ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ಅವ್ವ ಸೇವಾ ಟ್ರಸ್ಟ್ ವಹಿಸಲಿದ್ದು, ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಭಾಗಿಯಾಗುವ ಮೂಲಕ ಅವ್ವನ ಮಮತೆ, ಪ್ರೀತಿಯ ಬೀಜವನ್ನು ಮತ್ತೆ ಬಿತ್ತಬೇಕಿದೆ ಎಂದು ಲಿಂಗಾಯತ ಪ್ರಗತಿಶೀಲ ಸಂಘ ಹಾಗೂ ಅವ್ವ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು ವಿನಂತಿಸಿದ್ದಾರೆ.

'ಸೇವಾರತ್ನ' ಪ್ರಶಸ್ತಿ ಪರಸ್ಕೃತರಾದ ತೋಂಟದಾರ್ಯ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಎಸ್. ಪಟ್ಟಣಶೆಟ್ಟರರನ್ನು ಗೌರವಿಸಲಾಗುವುದು. ಗದುಗಿನ 'ಸ್ಪಂದನ' ಕಿವುಡ ಹಾಗೂ ಮೂಗ ಮಕ್ಕಳ ಶಾಲೆಯ ವಿದ್ಯಾರ್ಥಿಗಳಿಗೆ ಬಟ್ಟೆ ಹಾಗೂ ಅವಶ್ಯಕ ಸಾಮಗ್ರಿಗಳನ್ನು ವಿತರಿಸಲಾಗುವುದು. ಅವ್ವನ ಕುರಿತು ವಿಶೇಷ ಸಂಗೀತ ಸೇವೆಯನ್ನು ಸಾವಿತ್ರಿ ಲಮಾಣಿ ಹಾಗೂ ತಂಡದವರು ನಡೆಸಿಕೊಡಲಿದ್ದಾರೆ.

ಕೇಂದ್ರದ ಆಟ ನಡೆಯದು

▶▶ ಮೊದಲನೇ ಪುಟದಿಂದ

ಪ್ರತಿಭಟನೆಯಲ್ಲಿ ಗದಗ ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ನೀಲಮ್ಮ ಬೋಳನವರ, ಎಸ್‌ಸಿ ಘಟಕದ ಅಧ್ಯಕ್ಷ ಬಸವರಾಜ ಕಡೇಮನಿ, ಬ್ಲಾಕ್ ಅಧ್ಯಕ್ಷ ಶರಣಪ್ಪ ಬೆಟಗೇರಿ, ಡಿ.ಡಿ. ಮೋರನಾಳ, ನಗರಸಭೆ ಸದಸ್ಯರಾದ ಬರಕತ್‌ಅಲಿ ಮುಲ್ಲಾ, ಶಕುಂತಲಾ ಅಕ್ಕಿ, ಲಕ್ಷ್ಮೀ ಸಿದ್ದಮ್ಮನಹಳ್ಳಿ, ಪರವೀನಬಾನು ಮುಲ್ಲಾ, ಮುಖಂಡರಾದ ಜಿ.ಎಂ. ದಂಡಿನ, ಉಮರಫಾರೂಕ್ ಹುಬ್ಬಳ್ಳಿ, ಅನಿಲ ಸಿದ್ದಮ್ಮನಹಳ್ಳಿ, ವಸಂತ ಸಿದ್ದಮ್ಮನಹಳ್ಳಿ, ವಿದ್ಯಾಧರ ದೊಡ್ಡಮನಿ, ಚನ್ನವೀರ ಮಳಗಿ, ಮಹಮ್ಮದ ಶಾಲಗಾರ, ಅಬ್ದುಲ್ ಮುನಾಫ ಮುಲ್ಲಾ, ವಿನಾಯಕ ಬಳ್ಳಾರಿ, ಮಂಜುನಾಥ ಪೂಜಾರ, ರಮೇಶ ಚಲವಾದಿ, ಶರಣಪ್ಪ ಗೊಳಗೊಳಕಿ, ಯುಸೂಫ ಡಂಬಳ, ಶಿವಾನಂದ ಕರಿಯಣ್ಣವರ, ಶಿವಾನಂದ ಮಾದರ, ಪರಪ್ಪ ಕಮತರ, ಆಂಜನೇಯ ಕಟಗಿ, ಸರ್ಫರಾಜ ಬಬರ್ಚಿ, ಮಂಜು ಮುಳಗುಂದ, ಎಚ್.ಕೆ. ಅಕ್ಕಿ, ಬಸವರಾಜ ಮನಗುಂಡಿ, ಸುರೇಶ ಮಾಗಡಿ, ಶಿವರಾಜ ಕೋಟಿ, ಸಂಗಮೇಶ ಕೆರಕಲಮಟ್ಟಿ, ಮಹ್ಮದಸಾಬ ಬೆಟಗೇರಿ, ಅನ್ವರ ನದಾಫ, ಮಹಾಂತೇಶ ಮಡಿವಾಳರ, ಶಂಭು ಕಾಳೆ, ಸುದೀರ ಶಿವಪೂರ, ಶರಣಪ್ಪ ಬೋಳನವರ, ರಮೇಶ ರೋಣದ, ಉಮರಫಾರೂಕ್ ಬಾರಿಗಿಡದ, ಕಿರಣ ಗಾಮನಗಟ್ಟಿ, ಅರವಿಂದ ಇಸ್ರಪ್ಪನವರ, ಚನ್ನಬಸಪ್ಪ ಅಕ್ಕಿ, ರಾಜು ಅಡರಕಟ್ಟಿ, ಕಾಶಪ್ಪ ಇಸ್ರಪ್ಪನವರ, ಮೋಹನ ದೊಡಕುಂಡಿ, ಕಿರಣ ಮಾರ್ಕಾಪೂರ, ಪ್ರವೀಣ ಜಂತ್ಲಿ, ಸಮೀರ ಕೊಟ್ಟೂರ, ಶಾಹೀದ ಶೇಖ, ಶಾರೂಖ ಹುಯಿಲಗೋಳ, ಪ್ರಧಾನಿ ಕರಿ, ಕೃಷ್ಣಾ ಬಳ್ಳಾರಿ, ಸಿದ್ದಣ್ಣ ಮೇಳಣ್ಣವರ, ರವಿ ಬಾವರೆ, ಈರಣ್ಣ ಭಜಂತ್ರಿ, ವೆಂಕಟೇಶ ಗುಜಮಾಗಡಿ, ಭಕ್ಷಿ ತಹಶೀಲ್ದಾರ, ಯುವರಾಜ ಬಳ್ಳಾರಿ, ಹನಮಂತ ದಾಸ್ವಲ, ನಾಜಿನಾಬೇಗಂ ಯಲಿಗಾರ, ಉಮಾ ದ್ಯಾವನೂರ, ಮುಸ್ತಾಕ ಸೈಯ್ಯದ, ಗಾಯತ್ರಿ ಸಿದ್ದಮ್ಮನಹಳ್ಳಿ, ಸುರೇಖಾ ಕುರಿ, ಲಲಿತಾ ಗೊಳಗೊಳಕಿ, ವಹೀದಾ ಕಲೀಫ, ಡಾ. ತನುಜಾ ಗೋವಿಂದಪ್ಪಗೌಡ್ರ, ರೇಣುಕಾ ಕುರಿ, ದ್ರಾಕ್ಷಾಯಿಣಿ ಹಾಸಲಕರ, ಬಸಮ್ಮ ಗುದ್ಲಾನವರ, ವಾಣಿ ಹಿರೇಮಠ, ಅಭಿಷಯ ಅಬಿನೇಶ, ನಾಡಗೌಡ್ರ, ಲಕ್ಷ್ಮಣ ವಡ್ಡರ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಾತಿ ಜನಗಣತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ

▶▶ ಮೊದಲನೇ ಪುಟದಿಂದ

ಸಭೆ ನಡೆಯುವ ಸ್ಥಳದ ಬೂತ್ ಅಧ್ಯಕ್ಷರ ಮನೆಗೆ ವಿಜಯೇಂದ್ರ ಭೇಟಿ ನೀಡುವ ಮೂಲಕ ಬೂತ್ ಮಟ್ಟದಿಂದ ಪಕ್ಷ ಸಂಘಟನೆಗೆ ಒತ್ತು ನೀಡಲಿದ್ದಾರೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಮುತ್ತಣ್ಣ ಲಿಂಗನಗೌಡ್ರ, ನಗರಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ ಅಬ್ಬಿಗೇರಿ, ಬಿಜೆಪಿ ಮುಖಂಡರಾದ ರಾಜು ಕುರುಡಗಿ, ಸಿದ್ದಪ್ಪ ಪಲ್ಲೇದ, ಶ್ರೀಪತಿ ಉಡುಪಿ, ವಿಜಯಲಕ್ಷ್ಮೀ ಮಾನ್ವಿ, ಉಮೇಶಗೌಡ ಪಾಟೀಲ, ಪ್ರಶಾಂತ ನಾಯ್ಕರ್ ಮುಂತಾದವರು ಉಪಸ್ಥಿತರಿದ್ದರು.

ಮೈಲಾರೆಪ್ಪ ಮೆಣಸಗಿ ದತ್ತಿ ಕಾರ್ಯಕ್ರಮದಲ್ಲಿ ಡಾ. ಸಿದ್ದಣ್ಣ ಜಕಬಾಳ ಅಭಿಮತ

ಸಾಹಿತ್ಯ, ಸಂಗೀತಕ್ಕೆ ಜನಪದವೇ ಬೇರು

■ ವಿಜಯಸಾಕ್ಷಿ ಸುದ್ದಿ, ಗದಗ

ಕನ್ನಡದಲ್ಲಿ ಜಾನಪದ ಪರಂಪರೆ ಭೌದ್ಧ ಧರ್ಮದ ಅವಸಾನದ ನಂತರ ಕಾಣಬಹುದಾಗಿದೆ. ತಿರುಳ್ಗನ್ನಡ ನಾಡಿನ ಪ್ರದೇಶದಲ್ಲಿ ವಿಶಿಷ್ಠವಾದ ಜನಪದ ಸಂಸ್ಕೃತಿ ಬೆಳೆದುಬಂದಿತು. ಪಶುಪಾಲಕರು ಈ ಸಾಹಿತ್ಯದ ಉಗಮಕ್ಕೆ ಮುಖ್ಯ ಕಾರಣೀಕರ್ತರು. ಇಂದಿನ ಸಂಗೀತದ ಲಯಗಳಿಗೆ ಜಾನಪದ ಪ್ರಭಾವ ದಟ್ಟವಾಗಿರುವದನ್ನು ಕಾಣಬಹುದಾಗಿದೆ ಎಂದು ಜಾನಪದ ವಿದ್ವಾಂಸ ಡಾ. ಸಿದ್ದಣ್ಣ ಜಕಬಾಳ ಅಭಿಪ್ರಾಯಪಟ್ಟರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಮೈಲಾರೆಪ್ಪ ಮೆಣಸಗಿ ದತ್ತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ, ದೊಡ್ಡಾಟ, ನಿರಕ್ಷರಕುಕ್ಷಿಗಳು ಅದ್ಭುತವಾದ ಜೀವನ ಮೌಲ್ಯಗಳನ್ನು ಹೊಂದಿರುವ ಸಾಹಿತ್ಯವನ್ನು ಸೃಷ್ಟಿಸಿದರು. ಮುಂದೆ ಅದರ ಬುನಾದಿಯ ಮೇಲೆ ಸಾಹಿತ್ಯ ಮತ್ತು ಸಂಗೀತ ಬೆಳೆದುಬಂದಿದೆ. ಈ ಲಯಗಳನ್ನು ಬಳಸಿಕೊಂಡು ಸಿನಿಮಾ ಸಾಹಿತ್ಯ ಕೂಡಾ ರಚನೆಗೊಂಡಿತು. ಸಾಹಿತಿಗಳಿಗೆ, ಸಂಗೀತಗಾರರಿಗೆ ಜನಪದವೇ ಮೂಲ ಬೇರು ಎಂದು ತಿಳಿಸಿದರು.

ಶಾಂತಲಾ ಹಂಚಿನಾಳ ಮಾತನಾಡಿ, ಕಾಯಕಕ್ಕೆ ಶ್ರೇಷ್ಠ ಹೆಸರು ಮೈಲಾರೆಪ್ಪ ಮೆಣಸಗಿ. ಪುಸ್ತಕಗಳನ್ನ ಹೊತ್ತು ಮಾರಿ ನಂತರ ಕರ್ನಾಟಕದಲ್ಲಿಯೇ ಹೆಸರುವಾಸಿಯಾಗುವ ರೀತಿಯಲ್ಲಿ ವಿದ್ಯಾನಿಧಿ ಪ್ರಕಾಶನ ಹಾಗೂ ಶಿವಕುಮಾರ ಏಜೆನ್ಸಿಗಳನ್ನು ಸ್ಥಾಪಿಸಿ ಮುದ್ರಣ ಕಾಶಿಗೆ ಅನ್ವರ್ಥವನ್ನು ಕಲ್ಪಿಸಿದರು ಎಂದರು.

ಜಯದೇವ ಮೆಣಸಗಿ ಮಾತನಾಡಿ, ಸಾಹಿತ್ಯ ಪರಿಷತ್ತು ಪ್ರತಿ ವರ್ಷ ಅರ್ಥಪೂರ್ಣವಾಗಿ ದತ್ತಿ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ. ತಂದೆಯವರ ಆಶಯದಂತೆ ಶಿಕ್ಷಣ ಮತ್ತು ಪುಸ್ತಕ ದಾಸೋಹದ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಬಂದಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಮುದ್ರಣ ಕ್ಷೇತ್ರದಲ್ಲಿ ಅಪಾರವಾದ ಅನುಭವ, ಪ್ರಖ್ಯಾತಿ ಗಳಿಸಿದ ಮೈಲಾರೆಪ್ಪ ಮೆಣಸಗಿಯವರ ಹೆಸರಿನಲ್ಲಿ ಸಮಾಜಕ್ಕೆ ಪ್ರಶಸ್ತಿಯ ಗರಿ ಮೂಡಲಿ. ಮುದ್ರಣ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಇವರ ಹೆಸರಿನಲ್ಲಿ ಪ್ರತಿವರ್ಷ ಸಂಸ್ಮರಣೆಯ ದಿನದಂದು ಪ್ರಶಸ್ತಿ ನೀಡುವ ದಿಸೆಯಲ್ಲಿ ದತ್ತಿದಾನಿಗಳು ಚಿಂತನೆ ಮಾಡಬೇಕೆಂದರು.

ಮಾಜಿ ಸಚಿವ ಎಸ್.ಎಸ್. ಪಾಟೀಲ ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಿಶೋರಬಾಬು ನಾಗರಕಟ್ಟಿ ಸ್ವಾಗತಿಸಿದರು. ಶಿವಾನಂದ ಗಿಡ್ನಂದಿ, ದತ್ತಪ್ರಸನ್ನ ಪಾಟೀಲ ನಿರೂಪಿಸಿದರು. ಶ್ರೀಕಾಂತ ಬಡ್ಡೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರೊ. ಕೆ.ಎಚ್. ಬೇಲೂರ, ಡಾ. ಜಿ.ಬಿ. ಪಾಟೀಲ, ಪ್ರೊ. ಸಿದ್ದಲಿಂಗೇಶ ಸಜ್ಜನಶೆಟ್ಟರ, ಪ್ರೊ. ಅನ್ನದಾನಿ ಹಿರೇಮಠ, ಬಸವರಾಜ ಗಣಪ್ಪನವರ, ಡಾ. ಅಕ್ಕಮಹಾದೇವಿ ರೊಟ್ಟಿಮಠ, ಪ್ರೊ. ಆಯ್.ಎಸ್. ಹಿರೇಮಠ, ಎಸ್.ಎಂ. ಕಾತರಕಿ, ಆರ್.ಖಿ. ಕಪ್ಪಲಿ, ರತ್ನಕ್ಕ ಪಾಟೀಲ, ಪ್ರ. ತೊ. ನಾರಾಯಣಪುರ, ಬಿ.ಎಸ್. ಹಿಂಡಿ, ಯು.ಎಸ್. ಕಣವಿ, ಶೈಲಜಾ ಗಿಡ್ನಂದಿ, ಎಸ್.ಎಫ್. ಬೆನಕಣ್ಣವರ, ಬಸವರಾಜ ವಾರಿ, ಡಾ. ಶಂಕರ ಬಾರಿಕೇರ, ಕೆ.ಜಿ. ವ್ಯಾಪಾರಿ, ಎಂ.ವಿ. ಕೆಂಬಾವಿಮಠ, ಪಿ.ಎಚ್. ಕಡಿವಾಲ, ಎಂ.ಎಚ್. ಸವದತ್ತಿ, ಸಿ.ಎಂ. ಮಾರನಬಸರಿ, ಮಲ್ಲಪ್ಪ ಹುಯಿಲಗೋಳ, ಎಂ.ಎಚ್. ಹುಲ್ಲೂರ, ಎಸ್.ಎಫ್. ಭಜಂತ್ರಿ, ಶಂಕರಗೌಡ ಪಾಟೀಲ, ಸೂರಜಗೌಡ ಪಾಟೀಲ, ಪ್ರಶಾಂತ ಕನಾಜ, ಎ.ಸಿ. ಹಿರೇಮಠ, ಜಿ.ಎ. ಪಾಟೀಲ, ಕೆ.ಎಂ. ಅಡವಿ, ಅ.ದ. ಕಟ್ಟೀಮನಿ, ಅಶೋಕ ಸತ್ಯರೆಡ್ಡಿ, ಶಿವಮೂರ್ತಿ ಕುರೇರ, ಗೌಸಪಾಕ ರಾಜನಾಳ, ಎಂ.ಬಿ. ವಾಲ್ಮೀಕಿ, ಎಂ.ಎಫ್. ಡೋಣಿ, ಷಡಕ್ಷರಿ ಮೆಣಸಿನಕಾಯಿ, ಎಚ್.ಟಿ. ಸಂಜೀವಸ್ವಾಮಿ, ಲಿಂಗರಾಜ ಪಾಟೀಲ, ನಿರ್ಮಲಾ ಪಾಟೀಲ, ಆರ್.ಎಸ್. ಕುಂದಗೋಳ, ಅಮರೇಶ ರಾಂಪುರ, ಡಿ.ಎಸ್. ಬಾಪುರೆ ಮೊದಲಾವರು ಉಪಸ್ಥಿತರಿದ್ದರು.

ಶ್ರೀ ಜಾಗೃತ ಆಂಜನೇಯ ಸ್ವಾಮಿ ಕಾರ್ತಿಕೋತ್ಸವ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಸಿದ್ದಲಿಂಗ ನಗರದ ಹುಡ್ಕೋ ಕಾಲನಿಯಲ್ಲಿರುವ ಶ್ರೀ ಜಾಗೃತ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಡಿ.23ರ ಸಂಜೆ 7.30ಕ್ಕೆ ಕಾರ್ತಿಕ ದೀಪೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ದೀಪೋತ್ಸವದ ನಿಮಿತ್ತ ಮುಂಜಾನೆ ಶ್ರೀ ಜಾಗೃತ ಆಂಜನೇಯ ಸ್ವಾಮಿಗೆ ಅಭಿಷೇಕ ಮತ್ತು ವಿಶೇಷ ಪೂಜೆ ನಡೆಯಲಿದೆ. ಸಕಲ ಸದ್ಭಕ್ತರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಶ್ರೀ ಜಾಗೃತ ಆಂಜನೇಯ ಸ್ವಾಮಿಯವರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ವಸತಿ ನಿಲಯದ ಪ್ರವೇಶಕ್ಕೆ ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಗದಗ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಂದ ವಸತಿ ನಿಲಯ ಪ್ರವೇಶಕ್ಕೆ ಇಂಜಿನಿಯರಿಂಗ್, ಮೆಡಿಕಲ್, ಬಿಎಡ್ ಹಾಗೂ ಪ್ಯಾರಾ ಮೆಡಿಕಲ್ ಕೋರ್ಸ್‌ಗಳು ಪ್ರಾರಂಭವಾಗುವ ಹಿನ್ನಲೆಯಲ್ಲಿ, ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಡ್ಡಾಯವಾಗಿ www.sw.kar.nic.in ವೆಬ್‌ಸೈಟ್‌ನಲ್ಲಿ 2023-24ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಎಂಬ ಲಿಂಕ್‌ನಡಿ S.H.P. (State Hostel Portal) ಮೂಲಕ ವಿದ್ಯಾರ್ಥಿಗಳು ಖಾತೆ ಸೃಜಿಸಿದ ನಂತರ ಮೆಟ್ರಿಕ್ ನಂತರದ ವಸತಿ ನಿಲಯಕ್ಕೆ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಡಿ. 30 ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಇವರಿಗೆ ಸಂಪರ್ಕಿಸಬಹುದಾಗಿದೆ. ಗದಗ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಗದಗ 08372-297258/9480843128. ರೋಣ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ರೋಣ 08381-267120/9480843131. ಶಿರಹಟ್ಟಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಶಿರಹಟ್ಟಿ 08487-242312/9480843132. ಮುಂಡರಗಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಮುಂಡರಗಿ 08371-262449/9480843129. ನರಗುಂದ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ನರಗುಂದ 08377-245731/9480843130.

ಹನುಮ ಮಾಲಾಧಾರಿಗಳಿಂದ ಭಕ್ತಿಯ ಪೂಜೆ

■

ಶ್ರೀ ಜೋಡ ಮಾರುತಿ ಕಾರ್ತಿಕೋತ್ಸವ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ಕಿಲ್ಲಾ ಶ್ರೀ ಜೋಡ ಮಾರುತಿ ದೇವಸ್ಥಾನದದಲ್ಲಿ ಡಿ.23ರಂದು ಕಾರ್ತಿಕ ದೀಪೋತ್ಸವದ ನಿಮಿತ್ತ ಬೆಳಿಗ್ಗೆ ಅಭಿಷೇಕ, ಉಭಯ ಮಾರುತಿ ದೇವರಿಗೆ ವಿಶೇಷ ಅಲಂಕಾರ, ಸಾಯಂಕಾಲ 6.30ಕ್ಕೆ ಕಾರ್ತಿಕ ದೀಪೋತ್ಸವ ಕಾರ್ಯಕ್ರಮ, ಪ್ರಸಾದ ವಿತರಣೆ ನೆರವೇರಲಿದೆ.

ಸದ್ಭಕ್ತರು, ಓಣಿಯ ಗುರು-ಹಿರಿಯರು, ಯುವಕ ಮಂಡಳದ ಪದಾಧಿಕಾರಿಗಳು ಭಾಗವಹಿಸಿ ಶ್ರೀ ಜೋಡ ಮಾರುತಿ ದೇವರ ಕೃಪೆಗೆ ಪಾತ್ರರಾಗಲು ಟ್ರಸ್ಟ್ ಕಮಿಟಿಯ ಪ್ರಕಟಣೆ ವಿನಂತಿಸಿದೆ.

ಬಳಗಾನೂರ ಶ್ರೀ ಚನ್ನವೀರ ಶರಣರ ಜಾತ್ರೆ ಫೆ.16ಕ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

ತಾಲೂಕಿನ ಸುಕ್ಷೇತ್ರ ಬಳಗಾನೂರ ಗ್ರಾಮದ ಘನಮೌನಿ, ತ್ರಿಕಾಲ ಜ್ಞಾನಿ, ಮೌನತಪಸ್ವಿ ಚಿಕೇನಕೊಪ್ಪದ ಶ್ರೀಚನ್ನವೀರ ಶರಣರ 29ನೇ ಪುಣ್ಯಸ್ಮರಣೋತ್ಸವ, ಜಾತ್ರಾ ಮಹೋತ್ಸವ, ಸಾಮೂಹಿಕ ವಿವಾಹ, ಧಾರ್ಮಿಕ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಲಿವೆ ಎಂದು ಸುಕ್ಷೇತ್ರ ಬಳಗಾನೂರ ಶ್ರೀಮಠದ ಪೂಜ್ಯ ಶ್ರೀ ಶಿವಶಾಂತವೀರ ಶರಣರ ಸಾನ್ನಿಧ್ಯದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಶ್ರೀಮಠದ ಭಕ್ತರು, ಶರಣರ ಬಳಗದ ಹಿರಿಯರು ನಿರ್ಣಯಿಸಿದರು.

2024ರ ಫೆ.7ರಿಂದ 15ರವರೆಗೆ ಶ್ರೀಮಠದಲ್ಲಿ ಮಹಾತ್ಮರ 'ಬದುಕು ಬೆಳಕು' ಪ್ರವಚನ ಜರುಗಲಿದೆ. ಫೆ. 16ರಂದು ಬ್ರಾಹ್ಮೀ ಮುಹೂರ್ತದಲ್ಲಿ ಲಿಂಗದೀಕ್ಷಾ, ಅಯ್ಯಾಚಾರ ಕಾರ್ಯಕ್ರಮ, ನಂತರ ಸಾಮೂಹಿಕ ವಿವಾಹ, ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ ಮಹಾರಥೋತ್ಸವ, ಧರ್ಮಚಿಂತನ ಗೋಷ್ಠಿ ಹಾಗೂ 'ಶರಣಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ ಜರುಗುವದು. ಫೆ. 17ರಂದು ಸಂಜೆ 6 ಗಂಟೆಗೆ ಕಡುಬಿನ ಕಾಳಗ, ಲಘು ರಥೋತ್ಸವ, ಶರಣರ ಮೂರ್ತಿ ಮೆರವಣಿಗೆ, ಹಾಸ್ಯ ಸಂಜೆ ಕಾರ್ಯಕ್ರಮ ಹಾಗೂ ಸಿಡಿಮದ್ದು ಕಾರ್ಯಕ್ರಮ ಜರುಗುವದು ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಾಮೂಹಿಕ ವಿವಾಹದಲ್ಲಿ ವಧು-ವರರ ಹೆಸರುಗಳನ್ನು ಫೆ. 10ರ ಒಳಗಾಗಿ ನೋಂದಾಯಿಸಲು ಮೊ.ಸಂ.-8880808822 ಸಂಪರ್ಕಿಸಬಹುದು ಎಂದು ಸುಕ್ಷೇತ್ರ ಬಳಗಾನೂರ ಶ್ರೀಮಠವು ಪ್ರಕಟಣೆಯಲ್ಲಿ ತಿಳಿಸಿದೆ.

ಭಕ್ತ ಕನಕದಾಸರ ಜಯಂತ್ಯುತ್ಸವ ನಾಳೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ರಾಮಗಿರಿ ಗ್ರಾಮದಲ್ಲಿ ಡಿ.24ರ ಬೆಳಿಗ್ಗೆ 10ಕ್ಕೆ ಭಕ್ತ ಕನಕದಾಸರ 536ನೇ ಜಯಂತ್ಯುತ್ಸವ ಜರುಗಲಿದೆ. ಧಾರವಾಡ(ಮನ್ಸೂರು)ದ ಜ.ಶ್ರೀ ರೇವಣ ಸಿದ್ದೇಶ್ವರ ಮಹಾಮಠದ ಶ್ರೀ ಡಾ. ಬಸವರಾಜ ದೇವರು ಮಹಾಸ್ವಾಮಿಗಳು, ಹುಲ್ಲೂರಿನ ಅಮೋಘಿಮಠದ ಸಿದ್ಧಯ್ಯ ಷಣ್ಮುಕಯ್ಯ ಅಮೋಘಿಮಠ ಸಾನ್ನಿಧ್ಯ ವಹಿಸುವರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಕಾರ್ಯಕ್ರಮ ಉದ್ಘಾಟಿಸುವರು. ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕಾಧ್ಯಕ್ಷ ಶೇಖಪ್ಪ ಕಾಳೆ ಅಧ್ಯಕ್ಷತೆ ವಹಿಸುವರು. ಉಣ್ಣೆ ನಿಗಮದ ಮಾಜಿ ಅಧ್ಯಕ್ಷ ವೈ. ಎನ್. ಗೌಡರ ಉಪನ್ಯಾಸ ನೀಡುವರು. ಅತಿಥಿಗಳಾಗಿ ಸಚಿವ ಹೆಚ್.ಕೆ. ಪಾಟೀಲ, ಶಾಸಕರಾದ ಬಸವರಾಜ ಶಿವಣ್ಣವರ, ರಾಘವೇಂದ್ರ ಹಿಟ್ನಾಳ, ಡಾ.ಚಂದ್ರು ಲಮಾಣಿ, ಲಕ್ಷ್ಮಣರಾವ್ ಚಿಂಗಳೆ, ಬಸವರಾಜ ಬಸಳಕುಂದಿ, ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಫಕ್ಕೀರಪ್ಪ ಹೆಬಸೂರ, ಬಸಣ್ಣ ಬೆಟಗೇರಿ, ಆನಂದ ಗಡ್ಡದೇವರಮಠ, ಅಡಿವೆಕ್ಕ ಬೆಟಗೇರಿ, ಶಶಿಧರ ರೊಳ್ಳಿ, ವಿ.ಜಿ. ಪಡಗೇರಿ, ಪ್ರಕಾಶ ಕರಿ ಸೇರಿದಂತೆ ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು ಆಗಮಿಸುವರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹನೀಯರಿಗೆ ಸನ್ಮಾನ, ಬಳಿಕ ಹರ್ಲಾಪುರದ ಜಾನಪದ ಕಲಾ ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಕುರುಬರ ಸಂಘದ ತಾಲೂಕಾಧ್ಯಕ್ಷ ಶೇಖಪ್ಪ ಕಾಳೆ ತಿಳಿಸಿದ್ದಾರೆ.

ಆಕಸ್ಮಿಕ ಅವಘಡ: ಬಣವೆಗಳು ಬೆಂಕಿಗಾಹುತಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಇಲ್ಲಿನ ಗಜೇಂದ್ರಗಡ ರಸ್ತೆಯಲ್ಲಿನ ಹಿತ್ತಲದಲ್ಲಿನ ಆರು ಬಣವೆಗಳಿಗೆ ಆಕಸ್ಮಿಕ ಬೆಂಕಿ ತಗುಲಿ ಸುಟ್ಟು ಭಸ್ಮವಾದ ಘಟನೆ ಗುರುವಾರ ನಡೆದಿದೆ.

ರೋಣದಿಂದ ಆಗಮಿಸಿದ ಅಗ್ನಿಶಾಮಕ ದಳದವರು ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು. ಈ ಬಣವೆಗಳು ಸ್ಥಳೀಯ ರೈತರಾದ ಮಲ್ಲಪ್ಪ ಗೋಡಿ ಇವರಿಗೆ ಸೇರಿವೆ. ಇದರಲ್ಲಿ 2 ಟ್ರಾಕ್ಟರ್ ಜೋಳದ ಮೇವು, 2 ಟ್ರಾಕ್ಟರ್‌ನಷ್ಟು ಕಡಲೆ ಹೊಟ್ಟು ಮತ್ತು 2 ಟ್ರಾಕ್ಟರ್ ಶೇಂಗಾ ಹೊಟ್ಟಿನ ಬಣವೆಗಳಿದ್ದು, ಅಂದಾಜು 60 ಸಾವಿರ ರೂ. ಹಾನಿಯಾಗಿದೆ. ಇನ್ನೋರ್ವ ರೈತ ಬಸಪ್ಪ ನೀಲಪ್ಪ ಗೋಡಿಯವರ ಅಂದಾಜು 1 ಲಕ್ಷ ರೂ ಮೌಲ್ಯದ 2 ಟ್ರಾಕ್ಟರ್ ಜೋಳದ ಮೇವು, 2 ಟ್ರಾಕ್ಟರ್ ಕಡಲೆ ಹೊಟ್ಟು ಮತ್ತು 5 ಟ್ರಾಕ್ಟರ್ ಶೇಂಗಾ ಹೊಟ್ಟು, ಹನುಮಪ್ಪ ನಿಂಗಪ್ಪ ಗೋಡಿ ಇವರಿಗೆ ಸೇರಿದ 2 ಟ್ರಾಕ್ಟರ್ ಜೋಳದ ಮೇವು, 2 ಟ್ರಾಕ್ಟರ್ ಕಡಲೆ ಹೊಟ್ಟು ಮತ್ತು 4 ಟ್ರಾಕ್ಟರ್ ಶೇಂಗಾ ಹೊಟ್ಟು ಸುಟ್ಟಿದ್ದು, 90 ಸಾವಿರ ರೂ. ಗಳ ಹಾನಿಯನ್ನು ಅಂದಾಜಿಸಲಾಗಿದೆ.

ಅಗ್ನಿ ಶಾಮಕ ದಳದ ಆರ್.ಎಸ್. ನಕ್ಕರಗೊಂದಿ, ಸಂತೋಷ ತೋಟದ, ನಿಂಗನಗೌಡ ಅಳಗವಾಡಿ, ಹನುಮಂತ ಕಟ್ಟಿಮನಿ, ರಾಜೇಶ ಮಲ್ಲಾಪುರ ಬೆಂಕಿಯನ್ನು ನಂದಿಸುವಲ್ಲಿ ಶ್ರಮವಹಿಸಿದರು.

ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ನಿಲಯಕ್ಕೆ ಮರೀಚಿಕೆಯಾದ ಸ್ವಂತ ಕಟ್ಟಡ ಭಾಗ್ಯ

ಹಗಲಿನಲ್ಲಿ ಶಾಲೆ, ರಾತ್ರಿ ಅಲ್ಲಿಯೇ ವಸತಿ!

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಹಿಂದುಳಿದ ವರ್ಗ, ಬಡವರು, ಕೂಲಿಕಾರರ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಸದುದ್ದೇಶದಿಂದ ಗ್ರಾಮೀಣ ಭಾಗದ ಹೆಣ್ಣು ಮಕ್ಕಳಿಗಾಗಿ 12 ವರ್ಷಗಳ ಹಿಂದೆಯೇ ತಾಲೂಕಿನ ಗೊಜನೂರ ಗ್ರಾಮದಲ್ಲಿ ಕಸ್ತೂರಬಾ ಗಾಂಧಿ ಬಾಲಕಿಯರ ವಸತಿ ಶಾಲೆ ಪ್ರಾರಂಭಿಸಿತು.

ಪ್ರಾರಂಭದಲ್ಲಿ ಕಟ್ಟಡದ ಕೊರತೆಯಿಂದ ಗ್ರಾಮದ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿಯೇ ಪ್ರಾರಂಭವಾದ ಈ ವಸತಿ ಶಾಲೆಗೆ ಅಧಿಕಾರಿ ವರ್ಗ ಮತ್ತು ಜನಪ್ರತಿನಿಧಿಗಳು ಸ್ವಂತ ಕಟ್ಟಡ ಭಾಗ್ಯ ಕಲ್ಪಿಸುವ ಇಚ್ಛಾಶಕ್ತಿ ತೋರದಿರುವುದರಿಂದ ಇಲ್ಲಿನ ಮಕ್ಕಳು ಹತ್ತಾರು ಸಮಸ್ಯೆ-ಸಂಕಷ್ಟಗಳ ನಡುವೆ ದಿನ ದೂಡುತ್ತಿದ್ದಾರೆ.

ಶಿಕ್ಷಣ ಇಲಾಖೆಯ ವ್ಯಾಪ್ತಿಯ ಈ ಕಸ್ತೂರಬಾ ಗಾಂಧಿ ವಸತಿ ನಿಲಯವನ್ನು ಪ್ರಾರಂಭದಲ್ಲಿ ಗ್ರಾಮದ ಮಧ್ಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ಪ್ರಾರಂಭಿಸಲಾಯಿತು. ಈ ಶಾಲೆಯ ಕೆಲ ಕೊಠಡಿಗಳನ್ನು ಹಗಲಿನಲ್ಲಿ ತರಗತಿಗಳನ್ನಾಗಿ ಮತ್ತು ರಾತ್ರಿ ವಸತಿಗಾಗಿ ಬಳಸಿಕೊಳ್ಳಲಾಗುತ್ತಿದೆ. ವರ್ಷದಿಂದ ವರ್ಷಕ್ಕೆ ವಸತಿ ನಿಲಯದ ವಿದ್ಯಾರ್ಥಿನಿಯರ ಸಂಖ್ಯೆ ಏರಿಕೆಯಾಗಿ ಸದ್ಯ 90 ವಿದ್ಯಾರ್ಥಿನಿಯರಿದ್ದಾರೆ.

ಇಲ್ಲಿನ 50 ವಿದ್ಯಾರ್ಥಿನಿಯರು ಇದೇ ಕಟ್ಟಡದ ಶಾಲೆಯಲ್ಲಿ ಓದುತ್ತಾರೆ. ಶಾಲೆಯ 3 ಕೊಠಡಿಗಳನ್ನು ವಸತಿ ಶಾಲೆಯ ಬಳಸಿಕೊಳ್ಳಲಾಗುತ್ತಿದ್ದು, ಸದ್ಯ ಪ್ರಾಥಮಿಕ ಶಾಲೆಯಲ್ಲಿಯೂ ಓದುತ್ತಿರುವ 290 ಮಕ್ಕಳೂ ಸಹ ಕೊಠಡಿ ಕೊರತೆಯಿಂದ 25-30 ವಿದ್ಯಾರ್ಥಿಗಳು ಕಲಿಯುವ ಕೊಠಡಿಯಲ್ಲಿ 40ಕ್ಕಿಂತ ಹೆಚ್ಚು ಮಕ್ಕಳನ್ನು ಕೂರಿಸಲಾಗುತ್ತಿದೆ.

6ರಿಂದ 10ನೇ ತರಗತಿವರೆಗಿನ 90 ವಿದ್ಯಾರ್ಥಿನಿಯರನ್ನು 2 ಶಾಲಾ ಕೊಠಡಿಯಲ್ಲಿ ತುಂಬಲಾಗಿದೆ. ತಮ್ಮ ದಿನಬಳಕೆ ವಸ್ತುಗಳನ್ನು ತುಂಬಿದ ಟ್ರಂಕ್‌ನೊಂದಿಗೆ ಒಂದು ಕೊಠಡಿಯಲ್ಲಿ 50ಕ್ಕೂ ಹೆಚ್ಚು ಮಕ್ಕಳನ್ನು ತುಂಬಲಾಗಿದೆ. ಗಾಳಿ-ಬೆಳಕು ಇಲ್ಲದ ಕೊಠಡಿಯಲ್ಲಿಯೇ ಇವರಿಗೆ ಊಟ, ವಸತಿ, ಓದು ಎಲ್ಲವೂ. ಇಲ್ಲಿರುವ ನೀರು ಕುಡಿಯಲು ಯೋಗ್ಯವಾಗಿಲ್ಲ. ಇರುವ ಶುದ್ಧ ನೀರಿನ ಯಂತ್ರ, ಸೋಲಾರ್ ಕೆಟ್ಟು ನಾಮಕಾವಸ್ತೆಯಂತಾಗಿವೆ.

ಈ ವಸತಿ ವಿದ್ಯಾಲಯಕ್ಕಾಗಿ ಗ್ರಾಮದ ಗುಡ್ಡದಂಚಿನ ಗಾಯರಾಣ ಜಾಗದಲ್ಲಿ 2013ರಲ್ಲಿಯೇ 5 ಎಕರೆ ಜಮೀನು ಕೊಡಲಾಗಿದೆ. ಅಧಿಕಾರಿಗಳ ತಪ್ಪಿನಿಂದಲೂ, ಮಾಹಿತಿಯ ಕೊರತೆಯಿಂದಲೂ ಶಿಕ್ಷಣ ಇಲಾಖೆ/ಬಿಇಓ ಹೆಸರಿಗೆ ದಾಖಲಾಗಬೇಕಾದ ಜಮೀನು ತಾ.ಪಂ ಹೆಸರಿನಲ್ಲಿ ದಾಖಲಾಗಿದೆ. ಕಟ್ಟಡ ನಿರ್ಮಾಣಕ್ಕೆ ಅನುದಾನದ ಲಭ್ಯತೆಯಿದ್ದರೂ ಬಳಕೆಯಾಗದ್ದರಿಂದ ಆ ಅನುದಾನ ಪ್ರತಿವರ್ಷ ಜಮೆ-ಖರ್ಚಾಗುತ್ತಲೇ ಇದೆ. ಇದೀಗ ನಿವೇಶನ ಶಿಕ್ಷಣ ಇಲಾಖೆಗೆ ಹಸ್ತಾಂತರವಾಗಿದ್ದು, ಕೇವಲ ದಾಖಲೆ ತಿದ್ದುಪಡಿಗೆ 10 ವರ್ಷ ಕಳೆದಿರುವುದು ವಿಪರ್ಯಾಸದ ಸಂಗತಿ.

ಇಂತಹ ಪರಿಸ್ಥಿತಿಯಲ್ಲಿರುವ ವಿದ್ಯಾರ್ಥಿನಿಯರ ಅನಕೂಲಕ್ಕಿಂತ ಸರ್ಕಾರದ ಹಣ ಖರ್ಚು ಹಾಕಿ ಲಾಭ ಮಾಡಿಕೊಳ್ಳುವ ಜನಪ್ರತಿನಿಧಿಗಳು, ಅಧಿಕಾರಿ ವರ್ಗದ ದಾಹದಿಂದ 2014 ಮತ್ತು 2016ರಲ್ಲಿ ಬಂದಿರುವ ಹಾಸಿಗೆ, ದಿಂಬುಗಳನ್ನು ಗ್ರಾಮದ ಸೊಸೈಟಿ ಕಟ್ಟಡದ ಮೇಲ್ಛಾವಣಿ ಮೇಲೆ ಇಡಲಾಗಿದೆ. 5-6 ವರ್ಷಗಳಿಂದ ದಿಕ್ಕುದೆಸೆ ಇಲ್ಲದೇ ಮಳೆ-ಗಾಳಿ, ಬಿಸಿಲಿಗೆ ಬಿದ್ದಿರುವ ಗಾದಿಗಳು ಕೊಳೆತು ಹಾಳಾಗಿರುವುದು ನಿರ್ಲಕ್ಷದ ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

> ಗೊಜನೂರಿನ ಸರ್ಕಾರಿ ಶಾಲೆಯ ಕಟ್ಟಡದ ಕೊಠಡಿಯಲ್ಲಿ ನಡೆಯುತ್ತಿರುವ ಕಸ್ತೂರಬಾ ವಸತಿ ವಿದ್ಯಾಲಯದ ಸ್ವಂತ ಕಟ್ಟಡ ನಿರ್ಮಾಣದ 5 ಎಕರೆ ಜಮೀನಿನ ದಾಖಲೆಗಳನ್ನು ತಾ.ಪಂ ಇಲಾಖೆಯಿಂದ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ತಡವಾಗಿದೆ. ಇದೀಗ ಜಮೀನು ಇಲಾಖೆಗೆ ಹಸ್ತಾಂತರವಾಗಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಹೆಚ್ಚಿನ ಅನುದಾನಕ್ಕೆ ಹಿರಿಯ ಅಧಿಕಾರಿಗಳಿಗೆ ಕೋರಲಾಗಿದೆ. ಕೂಡಲೇ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಅಗತ್ಯ ಸೌಲಭ್ಯ ಕಲ್ಪಿಸುವ ಪ್ರಾಮಾಣಿಕ ಕಾರ್ಯ ಮಾಡಲಾಗುವುದು.
>
> – **ಜಿ.ಎಂ ಮುಂದಿನಮನಿ,** ಬಿಇಓ.

> 2011ರಲ್ಲಿ ಜಿ.ಪಂ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದ ವೇಳೆ ಗ್ರಾಮಕ್ಕೆ ಮೊರಾರ್ಜಿ ವಸತಿ ಶಾಲೆಯ ಜತೆಗೆ ಗ್ರಾಮೀಣ ಭಾಗದ ಬಡ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಕಸ್ತೂರಬಾ ಗಾಂಧಿ ವಸತಿ ವಿದ್ಯಾಲಯ ಮತು ನಿವೇಶನ ಮಂಜೂರು ಮಾಡಿಸುವಲ್ಲಿ ಯಶಸ್ವಿಯಾಗಿದ್ದೇವೆ. 5 ಎಕರೆ ಜಮೀನು, ಅನುದಾನವಿದ್ದರೂ 10-12 ವರ್ಷಗಳಿಂದ ಹೆಣ್ಣು ಮಕ್ಕಳು ಚಿಕ್ಕ ಶಾಲಾ ಕೊಠಡಿಯಲ್ಲಿಯೇ ದಿನ ದೂಡುತ್ತಿರುವುದು ಖೇದಕರ. ಇನ್ನಾದರೂ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿ ವರ್ಗ ಗಮನ ಹರಿಸಬೇಕು.
>
> – **ಎಂ.ಎಸ್. ದೊಡ್ಡಗೌಡರ.**
> ಜಿ.ಪಂ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು.

ವಿರೋಧ ಪಕ್ಷಗಳಿಂದ ಪ್ರಜಾಪ್ರಭುತ್ವದ ಕಗ್ಗೊಲೆ

■ ವಿಜಯಸಾಕ್ಷಿ ಸುದ್ದಿ, ಗದಗ

ದೇಶದಲ್ಲಿರುವ ಕಾಂಗ್ರೆಸ್ ಹಾಗೂ ಇಂಡಿಯಾ ಮೈತ್ರಿಕೂಟದ ಲೋಕಸಭಾ ಸದಸ್ಯರು ಲೋಕಸಭೆಯಲ್ಲಿ ಗದ್ದಲ ಎಬ್ಬಿಸಿರುವುದು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದು ಗದಗ ಜಿಲ್ಲಾ ಬಿಜೆಪಿ ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಎಂ. ಹಿರೇಮಠ ವಿರೋಧ ಪಕ್ಷದ ಸದಸ್ಯರ ವರ್ತನೆಯನ್ನು ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೇಂದ್ರದ ಚಳಿಗಾಲದ ಅದಿವೇಶನ ನಡೆಯುತ್ತಿದ್ದಾಗ, ಕೆಲ ಯುವಕರ ಅನುಚಿತ ವರ್ತನೆಯ ವಿಷಯವನ್ನೇ ಮುಂದಿಟ್ಟುಕೊಂಡು ಲೋಕಸಭೆಯ ವಿರೋಧ ಪಕ್ಷದ ಸದಸ್ಯರು ತಮ್ಮ ಜವಾಬ್ದಾರಿಯನ್ನು ಮರೆತು ಬೇಕಾಬಿಟ್ಟಿಯಾಗಿ ವರ್ತಿಸಿ ಸದನದ ಗೌರವಕ್ಕೆ ಧಕ್ಕೆ ತಂದಿದ್ದಾರೆ.

ಲೋಕಸಭೆಯಲ್ಲಿ ದುರ್ವರ್ತನೆಯನ್ನು ತೋರಿಸಿ ಸರ್ಕಾರದ ಹೆಸರಿಗೆ ಮಸಿ ಬಳಿಯುವ ಕಾರ್ಯಕ್ಕೆ ಕೈಹಾಕಿದ್ದು ವಿಷಾದನೀಯ ಸಂಗತಿ. ಸಾಂವಿಧಾನಿಕ ಹುದ್ದೆ ಮತ್ತು ಪ್ರಜಾಪ್ರಭುತ್ವಕ್ಕೆ ಇಂಡಿಯಾ ಒಕ್ಕೂಟದ ಸದಸ್ಯರು ಅಪಮಾನ ಮಾಡಿದ್ದಾರೆ ಎಂದು ಅವರು ಅಸಮಾಧಾನ ಹೊರಹಾಕಿದ್ದಾರೆ. ಕಳೆದ 2 ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಈ ದೇಶದ ಜನ ವಿರೋಧ ಪಕ್ಷದ ಸ್ಥಾನವನ್ನು ಕೂಡಾ ನೀಡಿಲ್ಲ. ಇನ್ನಾದರೂ ಕಾಂಗ್ರೆಸ್ ಪಕ್ಷದ ನಾಯಕರು ಜನಪರ ಹೋರಾಟವನ್ನು ಮಾಡಿ ಜನರ ಮನಸ್ಸನ್ನ ಗೆಲ್ಲಲಿ ಎಂದು ಹೇಳಿಕೆ ನೀಡಿದ್ದಾರೆ.

ವಿಕೃತ ಬುದ್ಧಿಯ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಕಲಬುರಗಿ ಜಿಲ್ಲೆಯ ಜೇವರ್ಗಿಯ ಶಾಂತಾನಗರದಲ್ಲಿ ಅಲ್ಪಸಂಖ್ಯಾತರ ವಿದ್ಯಾರ್ಥಿನಿಯರ ಹಾಸ್ಟೆಲ್ ಬಾತ್‌ರೂಮ್‌ನಲ್ಲಿ ಮೊಬೈಲ್ ಕ್ಯಾಮೆರಾವನ್ನು ಇಟ್ಟಿರುವ ಸಲೀಂ ಅಲಿ ಎಂಬ ಆರೋಪಿಗೆ ಕಠಿಣ ಶಿಕ್ಷೆ ನೀಡುವಂತೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಗದಗ ವತಿಯಿಂದ ಗದಗ ತಾಲೂಕಾ ದಂಡಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಗರ ಕಾರ್ಯದರ್ಶಿ ನಿಖಿತಾ ಸುತಾರ ಮಾತನಾಡಿ, ಇಂತಹ ಕೃತ್ಯವನ್ನು ಎಬಿವಿಪಿ ತೀವ್ರವಾಗಿ ಖಂಡಿಸುತ್ತದೆ. ಈ ರೀತಿಯ ಘಟನೆಯಿಂದ ವಿದ್ಯಾರ್ಥಿನಿಯರ ಪೋಷಕರಲ್ಲಿ ಆತಂಕ ಮನೆ ಮಾಡಿದೆ. ಪದೇ ಪದೇ ರಾಜ್ಯದಲ್ಲಿ ಇಂತಹ ಘಟನೆಗಳು ಬೆಳಕಿಗೆ ಬರುತ್ತಿದ್ದು, ರಾಜ್ಯದ ಕಾನೂನು ವ್ಯವಸ್ಥೆಯನ್ನು ಪ್ರಶ್ನೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಸರಕಾರ ಮತ್ತು ಪೊಲೀಸ್ ಇಲಾಖೆ ಈ ಕುರಿತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ನಗರ ಸಂಘಟನಾ ಕಾರ್ಯದರ್ಶಿ ಅರುಣ ಬಾರಕೇರ, ಕಾರ್ಯದರ್ಶಿಗಳಾದ ಅಭಿಷೇಕ ಮಲ್ಲನಗೌಡ್ರ, ಹರ್ಷ ಕಟ್ಟಿ, ಕೊಟ್ರೇಶ, ಉದಯ, ಸೇರದಿಂತೆ ಎಬಿವಿಪಿ ಸದಸ್ಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಮಕ್ಕಳು ನಿಶ್ಚಿಂತೆಯಿಂದ ಪರೀಕ್ಷೆ ಬರೆಯುವಂತೆ ಪ್ರೇರಣೆ ನೀಡುವುದರೊಂದಿಗೆ ಅವರಲ್ಲಿನ ಪರೀಕ್ಷಾ ಭಯವನ್ನು ಹೊಡೆದೋಡಿಸಿ ಆತ್ಮ ವಿಶ್ವಾಸದಿಂದ ಪರೀಕ್ಷೆ ಬರೆಯುವಂತೆ ಮಾಡಬೇಕಾದುದು ಶಿಕ್ಷಕರ ಆದ್ಯ ಕರ್ತವ್ಯವಾಗಿದೆ ಎಂದು ರೋಣ ಕ್ಷೇತ್ರ ಶಿಕ್ಷಣಾಧಿಕಾರಿ ರುದ್ರಪ್ಪ ಹುರಳಿ ಹೇಳಿದರು.

ಪಟ್ಟಣದ ಎಸ್‌ಕೆಆರ್‌ಕೆ ಸರಕಾರಿ ಪ್ರೌಢಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಕನ್ನಡ ಭಾಷಾ ಶಿಕ್ಷಕರ ವೇದಿಕೆ ಹಾಗೂ ಸರಕಾರಿ ಪ್ರೌಢಶಾ